Reg. No.JRL/A/SOU.Act./790/2002-03

# ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ.

Estd. 1994

Jolle Group












## 31ನೇ ವಾರ್ಷಿಕ ವರದಿ 2024-25

| | | | | | |
|---|---|---|---|---|---|
| ಸದಸ್ಯರು | 43+ ಸಾವಿರ | ಠೇವು | 331+ ಕೋಟಿ | ಖರೀದಿ | 29+ ಕೋಟಿ |
| ಸಾಲ | 163+ ಕೋಟಿ | ಶಾಖೆಗಳು | 81 | ಮಾರಾಟ | 33+ ಕೋಟಿ |





# ಸ್ಫೂರ್ತಿಚೇತನ

ಸಂಸ್ಥಾಪಕರು
**ಶ್ರೀ. ಅಣ್ಣಾಸಾಹೇಬ ಶಂಕರ ಜೊಲ್ಲೆ**
ಮಾಜಿ ಸಂಸದರು-ಚಿಕ್ಕೋಡಿ

ಸಹ ಸಂಸ್ಥಾಪಕರು
**ಸೌ. ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ**
ಶಾಸಕರು, ನಿಪ್ಪಾಣಿ
ಮಾಜಿ ಸಚಿವರು - ಕರ್ನಾಟಕ ಸರ್ಕಾರ

## ಆಡಳಿತ ಮಂಡಳಿ



**ಶ್ರೀ. ಅಣ್ಣಾಸಾಹೇಬ ಎಸ್. ಜೊಲ್ಲೆ**
ಯಕ್ಸಂಬಾ
ಸಂಸ್ಥಾಪಕರು



**ಸೌ. ಶಶಿಕಲಾ ಎ. ಜೊಲ್ಲೆ**
ಯಕ್ಸಂಬಾ
ಸಹ-ಸಂಸ್ಥಾಪಕರು, ನಿರ್ದೇಶಕರು



**ಶ್ರೀ. ಬಾಬುರಾವ ಎನ್. ಮಾಳಿ**
ನಾಗರಾಳ
ಅಧ್ಯಕ್ಷರು



**ಶ್ರೀ. ವಿಶ್ವನಾಥ ಡಿ. ಪೇಟಕರ**
ಯಕ್ಸಂಬಾ
ಉಪಾಧ್ಯಕ್ಷರು



**ಶ್ರೀ. ಬಸವಪ್ರಸಾದ ಎ. ಜೊಲ್ಲೆ**
ಯಕ್ಸಂಬಾ
ನಿರ್ದೇಶಕರು



**ಶ್ರೀ. ಜಗದೀಶ ಎಲ್. ಹಿಂಗ್ಲಜೆ**
ಯಕ್ಸಂಬಾ
ನಿರ್ದೇಶಕರು



**ಶ್ರೀ. ಕಲ್ಲಪ್ಪಾ ಬಿ. ನಾಯಿಕ**
ಹುನ್ನರಗಿ
ನಿರ್ದೇಶಕರು



**ಶ್ರೀ ಕೃಷ್ಣಪ್ಪಾ ಎ. ಪೂಜಾರಿ**
ಯಕ್ಸಂಬಾ
ನಿರ್ದೇಶಕರು



**ಶ್ರೀ. ಮಹೇಶ ಎ. ಭಾತೆ**
ಕರೋಶಿ
ನಿರ್ದೇಶಕರು



**ಶ್ರೀ. ರಮೇಶ ಎಮ್. ಚೌಗಲೆ**
ಜನವಾಡ
ನಿರ್ದೇಶಕರು



**ಶ್ರೀ. ಲಕ್ಷ್ಮಣ ಎಸ್. ಪ್ರಭಾತ**
ಯಕ್ಸಂಬಾ
ನಿರ್ದೇಶಕರು



**ಶ್ರೀ. ಜಗದೀಶ ಕೆ. ಜಾಧವ**
ಯಕ್ಸಂಬಾ
ನಿರ್ದೇಶಕರು



**ಶ್ರೀ. ಪವನ ಎಸ್. ಪಾಟೀಲ**
ಹರಗಾಪೂರ
ನಿರ್ದೇಶಕರು



**ಶ್ರೀ. ಬಾಳಾಸಾಬ ಕೆ. ಶಿಂದೆ**
ಬೇಡಕಿಹಾಳ
ನಿರ್ದೇಶಕರು



**ಶ್ರೀ. ರಾವಸಾಹೇಬ ಎಸ್. ಬಾಕಳೆ**
ಯಕ್ಸಂಬಾ
ನಿರ್ದೇಶಕರು



**ಶ್ರೀ. ಆನಂದ ಜೆ. ಗಿಡ್ಡ**
ಯಕ್ಸಂಬಾ
ನಿರ್ದೇಶಕರು



**ಶ್ರೀ. ಅಮೃತ ಸಿ. ಖೋತ**
ಯಾದನವಾಡಿ
ನಿರ್ದೇಶಕರು



**ಸೌ. ಸವಿತಾ ಸಿ. ಉಂದುರೆ**
ಮಲಿಕವಾಡ
ನಿರ್ದೇಶಕರು

## ಆಡಳಿತ



**ಶ್ರೀ. ಸಂತೋಷ ಎಸ್. ಪಾಟೀಲ**
B.A
ಪ್ರಧಾನ ವ್ಯವಸ್ಥಾಪಕರು (I/c)



**ಶ್ರೀ. ಮಹಾಂತೇಶ ಬಿ. ಶಿರೋಳ**
B.A.PGDCM
ಸಹಾಯಕ ಪ್ರಧಾನ ವ್ಯವಸ್ಥಾಪಕರು



**ಶ್ರೀ. ಸಂತೋಷ ಆರ್. ಪೂಜಾರಿ**
DCM
ಸಹಾಯಕ ಪ್ರಧಾನ ವ್ಯವಸ್ಥಾಪಕರು



**ಶ್ರೀ. ತಾನಾಜಿ ಎಸ್. ಶಿಂದೆ**
M.Com
ಲೇಕ್ಕಾಧಿಕಾರಿ

# ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ

## 31 ನೇ ವಾರ್ಷಿಕ ಸರ್ವಸಾಧಾರಣ ಸಭೆಯ

## ನೋಟೀಸು

ಸಹಕಾರಿ ಸಂಘದ 2024–2025 ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯನ್ನು **ಶನಿವಾರ ದಿನಾಂಕ 10–05–2025** ರಂದು ಸಾಯಂಕಾಲ 5 ಗಂಟೆ 30 ನಿಮಿಷ, ಸ್ಥಳ : ಶಿವಶಂಕರ ಜೊಲ್ಲೆ ಪಬ್ಲಿಕ್ (ಸಿ.ಬಿ.ಎಸ್.ಇ.) ನಣದಿ ಶಾಲೆಯ ಆವರಣದಲ್ಲಿ, ಈ ಕೆಳಗಿನ ವಿಷಯಗಳನ್ನು ಚರ್ಚಿಸಲು ಸರ್ವ ಸದಸ್ಯರನ್ನು ಕರೆಯಲಾಗಿದೆ. ಸದಸ್ಯರು ವೇಳೆಗೆ ಸರಿಯಾಗಿ ಹಾಜರಿರಬೇಕಾಗಿ ವಿನಂತಿ.

### –* ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು *–

1. ಹಿಂದಿನ ಅಂದರೆ 01–07–2024 ಕ್ಕೆ ಜರುಗಿದ ವಾರ್ಷಿಕ ಸರ್ವ ಸಾಧಾರಣ ಸಭೆಯ ನಡುವಳಿಕೆಗಳನ್ನು ಓದುವುದು ಮತ್ತು ಖಚಿತಪಡಿಸುವುದು.
2. ನಿರ್ದೇಶಕ ಮಂಡಳಿಯು ಮಂಡಿಸಿದ ಸನ್ 2024–2025 ನೇ ಸಾಲಿನ ವಾರ್ಷಿಕ ವರದಿಯನ್ನು ಓದಿ ಖಚಿತಪಡಿಸಿಕೊಳ್ಳುವುದು.
3. ಸನ್ 2024–2025 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಓದಿ ಅಂಗೀಕರಿಸುವುದು.
4. ಸನ್ 2024–2025 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಪರಿಶೀಲಿಸಿ, ಅಂಗೀಕರಿಸುವುದು.
5. ದಿಗ್ದರ್ಶಕ ಮಂಡಳಿಯವರು ಶಿಫಾರಸ್ಸು ಮಾಡಿದ ಸನ್ 2024–2025 ನೇ ಸಾಲಿನ ನಿವ್ವಳ ಲಾಭ ವಿಭಾಗಣೆಗೆ ಮಂಜೂರು ನೀಡುವುದು.
6. ಸನ್ 2025–2026 ನೇ ಸಾಲಿಗಾಗಿ ದಿಗ್ದರ್ಶಕ ಮಂಡಳಿಯವರು ತಯಾರಿಸಿದ ಅಂದಾಜು ಪತ್ರಿಕೆಗೆ ಮಂಜೂರು ನೀಡುವುದು.
7. ಸನ್ 2025–2026 ನೇ ಸಾಲಿಗಾಗಿ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಸಂಭಾವನೆ ನಿಗದಿಪಡಿಸುವುದು.
8. ನೂತನ ಶಾಖೆಗಳಿಗೆ ಮಂಜೂರು ನೀಡುವ ಕುರಿತು. ನೂತನ ಶಾಖೆಗಳ ಜಿಲ್ಲಾವಾರು ಪಟ್ಟಿ ಈ ಕೆಳಗಿನಂತಿದೆ.

   **1) ಬೆಳಗಾವಿ ಜಿಲ್ಲೆ** 1. ಅಥಣಿ 2. ಕಡೋಲಿ 3. ಚುಂಚನೂರ 4. ಸಾವಳಗಿ 5. ಬಿಡಿ 6. ಜಾಗನೂರ

   **2) ಬಾಗಲಕೋಟ ಜಿಲ್ಲೆ** 1. ಗಲಗಲಿ. **3) ವಿಜಯಪೂರ ಜಿಲ್ಲೆ** 1. ದೇವರಹಿಪ್ಪರಗಿ. **4) ಧಾರವಾಡ ಜಿಲ್ಲೆ** 1. ಧಾರವಾಡ 2. ಹುಬ್ಬಳ್ಳಿ

   ಈ ರೀತಿ ನಮ್ಮ ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿ ಶಾಖೆಗಳನ್ನು ಪ್ರಾರಂಭಿಸುವ ಗುರಿ ಇಟ್ಟುಕೊಂಡಿದ್ದು, ಸದರಿ ನೂತನ ಶಾಖೆಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರಿಂದ ಅನುಮತಿ ಪಡೆದು ಪ್ರಾರಂಭಿಸಲು ದಿಗ್ದರ್ಶಕ ಮಂಡಳಿಗೆ ಅಧಿಕಾರ ನೀಡಬೇಕಾಗಿ ವಿನಂತಿ.
9. 2020–2021 ರ ವರೆಗಿನ ಇದ್ದ ಲಾಭಾಂಶವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲು ಒಪ್ಪಿಗೆ ನೀಡುವ ಕುರಿತು.
10. ಶಾಖೆಗಳ ಹೆಸರಿನಲ್ಲಿ ಸ್ವಂತ ನಿವೇಶನ ಅಥವಾ ಕಟ್ಟಡ ಖರೀದಿಸುವ ಕುರಿತು.
11. ಅಧ್ಯಕ್ಷರ ಪರವಾನಿಗೆಯಿಂದ ಬರಬಹುದಾದ ಯಾವುದೇ ಇತರ ವಿಷಯಗಳು.

ದಿಗ್ದರ್ಶಕ ಮಂಡಳಿಯ ಆದೇಶದ ಮೇರೆಗೆ,

ಸ್ಥಳ : ಯಕ್ಸಂಬಾ
ದಿನಾಂಕ : 17–04–2025

**ಶ್ರೀ ಸಂತೋಷ ಎಸ್. ಪಾಟೀಲ** B.A.
ಪ್ರಧಾನ ವ್ಯವಸ್ಥಾಪಕರು (ಪ್ರಭಾರ)

**ಸೂಚನೆ –** 1) ಸಭೆಗೆ ಬರುವಾಗ ಸಭೆಯ ನೋಟಿಸು ತರಬೇಕು ಹಾಗೂ ಸಭೆಯು ನಡೆಯುವ ಸ್ಥಳವನ್ನು ಪ್ರವೇಶಿಸುವ ಮುನ್ನ ಹಾಜರಿ ಪುಸ್ತಕದಲ್ಲಿ ರುಜು ಮಾಡಬೇಕು. 2) ಸಭೆಯಲ್ಲಿ ಚರ್ಚಿಸುವ, ಸೂಚಿಸುವ ವಿಷಯಗಳು ಅಥವಾ ದೂರುಗಳೇನಾದರು ಇದ್ದಲ್ಲಿ ಸಭೆಯ ದಿನಾಂಕದಿಂದ 5 ದಿವಸ ಮುಂಚಿತವಾಗಿ ಲಿಖಿತವಾಗಿ ಸಹಕಾರಿಯ ಪ್ರಧಾನ ವ್ಯವಸ್ಥಾಪಕರ ವಿಳಾಸಕ್ಕೆ ತಲುಪಿಸಬೇಕು. 3) ಸಭೆಯ ವಿಷಯ ನಂ. 5 ಮತ್ತು 6 ರ ವಿವರಗಳನ್ನು ಅಥಾವೆ ಪುಸ್ತಕದಲ್ಲಿ ನಮೂದಿಸಲಾಗಿದೆ.
Zoom Meeting Link - https://us06web.zoom.us/meeting/register/Ed18d8g4Rneb8KTpXGEQ4Q

ಶ್ರೀ ಜ್ಯೋತಿ



ಸಹಕಾರ ರತ್ನ
**ಶ್ರೀ. ಅಣ್ಣಾಸಾಹೇಬ ಶಂಕರ ಜೊಲ್ಲೆ**
ಸಂಸ್ಥಾಪಕರು
ಮಾಜಿ–ಸಂಸದರು, ಚಿಕ್ಕೋಡಿ.

# ಸಾಧನೆಯ ಉತ್ತುಂಗದಲ್ಲಿ......

ಸಹಕಾರ ಕ್ಷೇತ್ರ ಗ್ರಾಮೀಣ ಜನತೆಯ ಜೀವನಾಡಿ ಹಾಗೂ ಪರಮಮಿತ್ರ ಇದ್ದಂತೆ. ಈ ಕ್ಷೇತ್ರದಲ್ಲಿ ಅಂದುಕೊಂಡಿದ್ದನ್ನು ಸಾಧಿಸಲು, ಉತ್ತುಂಗದ ಶಿಖರವನ್ನು ಏರಲು ಬಹಳಷ್ಟು ಅವಕಾಶಗಳಿವೆ. ಸಹಕಾರ ಕ್ಷೇತ್ರ ನಮ್ಮ ದೇಶದಲ್ಲಿ ವಿಶಾಲ ವ್ಯಾಪ್ತಿಯನ್ನು ಹೊಂದಿದ್ದು, ಸಹಕಾರ ಸಂಘವನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಭಾಗದ ಜನರಿಗೆ ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸಿ ನಿರುದ್ಯೋಗವನ್ನು ಹೋಗಲಾಡಿಸಬಹುದಾಗಿದೆ. ಅಲ್ಲದೆ ಸಹಕಾರ ಕ್ಷೇತ್ರ ಬೆಳೆದರೆ ಜನಸಾಮಾನ್ಯರು ಉತ್ತಮ ಜೀವನ ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಇಂದು ಜೊಲ್ಲೆ ಗ್ರೂಪ್ ನ ವಿವಿಧ ಅಂಗ ಸಂಸ್ಥೆಗಳು ಹಾಗೂ ಸಹಕಾರ, ಕೃಷಿ, ಶಿಕ್ಷಣ ಮುಂತಾದ ಕ್ಷೇತ್ರಗಳ ಮೂಲಕ ಉನ್ನತ ಮಟ್ಟದ ಸಾಧನೆಯನ್ನು ಮಾಡುವುದರ ಮೂಲಕ ದೇಶ್ಯಾದ್ಯಂತ ಚಿರಪರಿಚಿತವಾಗಿದೆ.

**ಆಧುನಿಕತೆಯತ್ತ ಹೆಜ್ಜೆ–**

1994 ರಲ್ಲಿ ಪ್ರಾರಂಭವಾದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸಹಕಾರಿಯು 2003 ರಲ್ಲಿ ಸೌಹಾರ್ದ ಕಾಯ್ದೆಯಡಿ ನೋಂದಣಿಯಾಗಿ ಜ್ಯೋತಿ ಬಜಾರ ಸ್ಥಾಪಿಸಿ ಮಾರುಕಟ್ಟೆ ವ್ಯವಸ್ಥೆಗೆ ಪಾದಾರ್ಪಣೆ ಮಾಡಿದೆ. ಯಕ್ಸಂಬಾದಂತಹ ಒಂದು ಪುಟ್ಟ ಹಳ್ಳಿಯಲ್ಲಿ ಆಧುನಿಕ ಸಭಾಗೃಹ ಹಾಗೂ ಲಿಫ್ಟ್ ಅಳವಡಿಸಿದ ನೂತನ ಸುಸಜ್ಜಿತವಾದ ಮುಖ್ಯ ಕಛೇರಿಯ ಕಟ್ಟಡವನ್ನು ಹೊಂದಿದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಜನರ ಬೇಡಿಕೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲಿವೆ. ಅದರಲ್ಲಿ ಮಾರುಕಟ್ಟೆ ವ್ಯವಸ್ಥೆಯು ಒಂದು. ನಗರ ಪ್ರದೇಶಗಳಲ್ಲಿ ಎಲ್ಲೆಡೆ ಒಂದೇ ಸೂರಿನಡಿ ಎಲ್ಲ ವಸ್ತುಗಳು ಸಿಗುವಂತೆ ಬಜಾರ್‌ಗಳು ತಲೆ ಎತ್ತುತ್ತಿವೆ. ಆದರೆ ಕಳೆದ ಎರಡು ದಶಕಗಳ ಹಿಂದೆಯೇ ಚಿಕ್ಕೋಡಿ ತಾಲೂಕಿನ ಒಂದು ಪುಟ್ಟ ಹಳ್ಳಿ ಯಕ್ಸಂಬಾದಲ್ಲಿ ಜ್ಯೋತಿ ಬಜಾರ್ ಪ್ರಾರಂಭಿಸಿ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

**ಜ್ಯೋತಿ ಬಜಾರ–**

ಸಹಕಾರ ಕ್ಷೇತ್ರದ ಮೂಲಕ ಗ್ರಾಹಕರಿಗೆ ಆರ್ಥಿಕ ನೆರವು ನೀಡುವುದರ ಜೊತೆಗೆ ದಿನಬಳಕೆಯ ವಸ್ತುಗಳನ್ನು ಒಂದೇ ಸೂರಿನಡಿ ಕಲ್ಪಿಸಿಕೊಡುವ ವ್ಯವಸ್ಥೆಯನ್ನು ಯಕ್ಸಂಬಾದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘವು ಕಳೆದ ಎರಡು ದಶಕಗಳಿಂದ ಮಾರುಕಟ್ಟೆ ವ್ಯವಹಾರವನ್ನು ಜ್ಯೋತಿ ಬಜಾರಗಳ ಮೂಲಕ ಗುಣಮಟ್ಟ ಕಾಯ್ದುಕೊಂಡು ಬಂದಿದೆ.

ಜೊಲ್ಲೆ ಗ್ರೂಪ್ ಸಂಸ್ಥೆಯ ಅಂಗ ಸಂಸ್ಥೆಗಳಲ್ಲೊಂದಾದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯು "ಜ್ಯೋತಿ" ಬ್ರ್ಯಾಂಡ್‌ನಡಿ ಹಲವಾರು ಉತ್ಪನ್ನಗಳನ್ನು ಗ್ರಾಹಕರಿಗೆ ಯೋಗ್ಯ ಬೆಲೆಯಲ್ಲಿ ಪರಿಶುದ್ಧ ಗೃಹ ಉಪಯೋಗಿ ವಸ್ತುಗಳು ನೇರವಾಗಿ ಉತ್ಪಾದನಾ ಘಟಕಗಳಿಂದ ಖರೀದಿಸಿ ಯಾವುದೇ ಹೆಚ್ಚಿನ ಲಾಭದ ಫಲಾಪೇಕ್ಷೆಯಿಲ್ಲದೇ ಪರಿಶುದ್ಧ ಹಾಗೂ ಗುಣಮಟ್ಟದ ವಸ್ತುಗಳನ್ನು ಮಾರಾಟ ಬೆಲೆಗಿಂತ ಕಡಿಮೆ ಬೆಲೆಗೆ ಗ್ರಾಹಕರಿಗೆ ಒದಗಿಸುತ್ತಿದೆ ಹಾಗೂ ಸ್ವ–ಸಹಾಯ ಸಂಘಗಳಿಂದ ತಯಾರಿಸಲ್ಪಟ್ಟ ವಸ್ತುಗಳಿಗೆ (ಸಜ್ಜಿ ರೊಟ್ಟಿ ಎಲ್ಲ ತರಹದ ಚಟ್ನಿಗಳು, ಸೆಂಡಿಗೆಗಳು, ಹಪ್ಪಳಗಳು) ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

**ಹೊಲಸೆಲ್–**

ಯಕ್ಸಂಬಾ ಹಾಗೂ ನಿಪ್ಪಾಣಿ ಪಟ್ಟಣದಲ್ಲಿ ವಿವಿಧ ಕಂಪನಿಗಳ ಜೊತೆಗೆ ಒಡಂಬಡಿಕೆ ಮಾಡಿಕೊಂಡು ಅನೇಕ ವಸ್ತುಗಳ ಡಿಸ್ಟ್ರಿಬ್ಯುಷನ್‌ಶಿಪ್ ಪಡೆದುಕೊಂಡು ನಿಪ್ಪಾಣಿ, ಹಾಗೂ ಯಕ್ಸಂಬಾ ಸುತ್ತಮುತ್ತಲಿನ ಗ್ರಾಮದ 1000ಕ್ಕೂ ಹೆಚ್ಚು ರೀಟೆಲ್ ವ್ಯಾಪಾರಸ್ಥರಿಗೆ ವಸ್ತುಗಳನ್ನು ಹೊಲಸೆಲ್ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಕೇವಲ ಹೊಲಸೆಲ್ ಮತ್ತು ರಿಟೇಲ್ ಉದ್ಯಮದಲ್ಲಿ ಅಷ್ಟೇ ಅಲ್ಲದೇ ಹಣಕಾಸಿನ ವ್ಯವಹಾರಗಳ ಸೇವೆಯನ್ನು ಕೂಡ ಸಾರ್ವಜನಿಕರಿಗೆ ಒದಗಿಸುವ ಗುರಿಯನ್ನಿಟ್ಟುಕೊಂಡು ಕಳೆದ ಆರು ವರ್ಷಗಳಿಂದ ಕ್ರೆಡಿಟ್ ವಿಭಾಗದ ಶಾಖೆಗಳನ್ನು ಪ್ರಾರಂಭಿಸಲಾಗಿದೆ, ಈಗ ಐದು ಜಿಲ್ಲೆಯಾದ್ಯಂತ ಒಟ್ಟು 63 ಕ್ರೆಡಿಟ್ ವಿಭಾಗದ ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು, ಹಾಗೂ ಇನ್ನೂ ಕ್ರೆಡಿಟ್ ವಿಭಾಗದ ಶಾಖೆಗಳನ್ನು ಕರ್ನಾಟಕ ರಾಜ್ಯಾದ್ಯಂತ ವಿಸ್ತರಿಸುವ ಗುರಿಯನ್ನಿಟ್ಟುಕೊಳ್ಳಲಾಗಿದೆ.

**ಕೋರ್ ಬ್ಯಾಂಕಿಂಗ್, NEFT & RTGS ಸೇವೆ ಮತ್ತು ಮಿನಿ ಎ.ಟಿ.ಎಮ್. ಸರ್ವಿಸ್–**

ಡಾಟಾ ಸೆಂಟರ್ ಮೂಲಕ ಕ್ರೆಡಿಟ್ ವಿಭಾಗದ 63 ಶಾಖೆಗಳನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಳವಡಿಸುವುದರೊಂದಿಗೆ ಮೋದಿಜಿಯವರ ಡಿಜಿಟಲ್ ಇಂಡಿಯಾ ಕನಸನ್ನು ಸಹಕಾರ ಕ್ಷೇತ್ರದ ಮುಖಾಂತರ ಸಾಕಾರಗೊಳಿಸುವಲ್ಲಿ ಒಂದು ಹೊಸ ಹೆಜ್ಜೆಯನ್ನು ಇಟ್ಟಿದ್ದೇವೆಂದು ಹೇಳಲು ಅಭಿಮಾನವೆನಿಸುತ್ತದೆ. ಸಹಕಾರಿಯ ಸಹಯೋಗದೊಂದಿಗೆ ನಮ್ಮ ಸದಸ್ಯ ಗ್ರಾಹಕರು ತಮ್ಮ ಖಾತೆಯಿಂದ ಯಾವುದೇ ಬ್ಯಾಂಕಿಗೆ NEFT & RTGS ಮುಖಾಂತರ ಹಣ ವರ್ಗಾವಣೆ ಮಾಡಬಹುದಾಗಿದೆ. ಸಹಕಾರಿಯು ಇದರ ಜೊತೆಗೆ ಮಿನಿ ಎ.ಟಿ.ಎಮ್. ನಂತಹ ಆಧುನಿಕ ತಂತ್ರಜ್ಞಾನವನ್ನು ಸಹ ಒದಗಿಸುತ್ತಿದೆ. ಸಹಕಾರಿಯ ಎಲ್ಲ ಗ್ರಾಹಕರಿಗೆ ಮೊಬೈಲ್ ಬ್ಯಾಂಕಿಂಗ್, ಇಂಟರನೆಟ್ ಬ್ಯಾಂಕಿಂಗ್ ಸೇವೆಯನ್ನು ಹಾಗೂ ಎಸ್.ಎಮ್.ಎಸ್. ಸೇವೆಯನ್ನು ಒದಗಿಸುತ್ತಿದೆ.

**ಜ್ಯೋತಿ ಕಿರು ಸಾಲ–**

ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಮಹಿಳೆಯರು ಕುಲಕಸಬು, ಗುಡಿಕೈಗಾರಿಕೆ, ಹೈನುಗಾರಿಕೆ, ಲಘು ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಅವರ ಉದ್ಯೋಗಗಳಿಗೆ ಅನುಸಾರವಾಗಿ ಆರ್ಥಿಕವಾಗಿ ಅನುಕೂಲವಾಗುವ ಉದ್ದೇಶದಿಂದ ಜ್ಯೋತಿ ಕಿರು ಸಾಲ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಇಂದು ಅವರ ಮನೆ ಬಾಗಿಲಿಗೆ ಹೋಗಿ, ಯಾವುದೇ ಕಾಗದ ಪತ್ರಗಳ ಹೊರೆ ಇಲ್ಲದೆ ರೂ. 5,000/– ರಿಂದ 30,000/– ರೂ. ವರೆಗೆ ಜ್ಯೋತಿ ಕಿರು ಸಾಲ ನೀಡುವುದರೊಂದಿಗೆ, ಅವರು ಆರ್ಥಿಕವಾಗಿ ಸಬಲೀಕರಣ ಹೊಂದಿ ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ಸಹಕಾರಿ ಸಂಘವು ನೆರವಾಗಿದೆ. ಸದರಿ ಆರ್ಥಿಕ ವರ್ಷದಲ್ಲಿ ಸುಮಾರು 4885 ಮಹಿಳಾ ಸದಸ್ಯರಿಗೆ ರೂ. 13 ಕೋಟಿ 15 ಲಕ್ಷ 25 ಸಾವಿರ ಸಾಲವನ್ನು ವಿತರಿಸಲಾಗಿದೆ. ಸಾಲ ಕೊಡುವುದು ಮತ್ತು ಮರುಪಾವತಿ ಮಾಡುವುದರ ಮೂಲಕ ಮಹಿಳೆಯರು ಸ್ವಾವಲಂಬಿಯಾಗಿ ಬದುಕಲು ಸಹಕಾರಿ ಸಂಘವು ಅನುಕೂಲ ಮಾಡಿಕೊಟ್ಟಿದೆ. ಜ್ಯೋತಿ ಕಿರು ಸಾಲಗಾರರ ಹಾಗೂ ವಾರಸುದಾರರ ನೈಸರ್ಗಿಕ ಮರಣಕ್ಕೆ ರೂ. 30,000/– ವರೆಗೆ ಅಪಘಾತ ಮರಣಕ್ಕೆ 75,000/– ಪರಿಹಾರ ನಿಧಿಯನ್ನು ಸಹಕಾರಿ ಸಂಘವು ನೀಡುತ್ತಿದೆ.

**ಸದಸ್ಯರ ಕಲ್ಯಾಣ ನಿಧಿ –**

ಸನ್ 2024–25 ನೇ ಸಾಲಿನಲ್ಲಿ ಮರಣಹೊಂದಿದ 42 ಜನ ಸದಸ್ಯರ ವಾರಸುದಾರರಿಗೆ ರೂ. 13.14 ಲಕ್ಷ ರೂಗಳ ಪರಿಹಾರ ಧನವನ್ನು ವಿತರಿಸಲಾಗಿದೆ.

**ಸಹಕಾರಿ ಸಂಘದ ಇತರ ಸೇವೆಗಳು –**

ಸಹಕಾರಿ ಸಂಘವು ಕ್ರೆಡಿಟ್ ವಿಭಾಗದ ಮೂಲಕ ಗ್ರಾಹಕರಿಗೆ ಅನೇಕ ರೀತಿಯ ಸಾಲ ಸೌಲಭ್ಯ, ಸೇರಿದಂತೆ ಒಂದೇ ಸೂರಿನಡಿಯಲ್ಲಿ ಲೈಫ್, ಹೆಲ್ತ್ ಮತ್ತು ಜನರಲ್ ಇನ್ಸೂರೆನ್ಸ್, ಮ್ಯುಚ್ಯುವಲ್ ಫಂಡ್ಸ್, ಶೇರ್ ಟ್ರೇಡಿಂಗ್, ಪ್ಯಾನ್ ಕಾರ್ಡ್, ವಿದೇಶಿ ಹಣ ವಿನಿಮಯ, ಹಣ ವರ್ಗಾವಣೆ ಇವಲ್ಲದೇ ಇನ್ನೂಳಿದ ವಿಮಾನ, ರೈಲು, ಬಸ್ ಟಿಕೆಟ್ ಬುಕಿಂಗ್, ಇ–ಸ್ಟ್ಯಾಂಪ್, ಎಟ್ ಪಾರ್ ಚೆಕ್, ಡಿಟಿಹೆಚ್ ಮತ್ತು ಮೊಬೈಲ್ ರಿಚಾರ್ಜ್ ಇತ್ಯಾದಿ ಸೇವೆಗಳನ್ನು ಒದಗಿಸುತ್ತಿದೆ.

**ಕಾರ್ಯ ಸಾಧನೆ –**

ಸಹಕಾರಿ ಸಂಘವು 1994 ನೋಂದಣಿಗೊಂಡು ಇಂದು ಜ್ಯೋತಿ ಬಜಾರ ವಿಭಾಗ, ಮೆಡಿಕಲ್ ವಿಭಾಗ, ಬಟ್ಟೆ ವಿಭಾಗ, ಪ್ರಿಂಟಿಂಗ್ ಪ್ರೆಸ್ ವಿಭಾಗ, ಹೋಲ್‌ಸೆಲ್ ವಿಭಾಗ ಮತ್ತು ಕ್ರೆಡಿಟ್ ವಿಭಾಗಗಳನ್ನು ಒಳಗೊಂಡು ಒಟ್ಟು 81 ಶಾಖೆಗಳನ್ನು ಹೊಂದಿದೆ. ಸಹಕಾರಿಯು ಇಲ್ಲಿಯವರೆಗೆ ಒಟ್ಟು 43,176 ಸದಸ್ಯರನ್ನೊಳಗೊಂಡು, ರೂ. 331 ಕೋಟಿಗೂ ಅಧಿಕ ಠೇವು ಸಂಗ್ರಹಿಸಿ, ರೂ. 163 ಕೋಟಿಗೂ ಅಧಿಕ ಸಾಲ ವಿತರಿಸಿ, 344 ಕೋಟಿ ದುಡಿಯುವ ಬಂಡವಾಳ ಹೊಂದಿ, ರೂ. 01 ಕೋಟಿ 72 ಲಕ್ಷ ಲಾಭ ಗಳಿಸುವದರ ಮೂಲಕ ಸಾಧನೆಯ ಮೈಲುಗಲ್ಲನ್ನು ತಲುಪಿದ್ದೆವೆಂದು ಹೇಳಲು ಹೆಮ್ಮೆ ಎನಿಸುತ್ತದೆ. ಸಹಕಾರಿಯು ಹೆಮ್ಮರವಾಗಿ ಬೆಳೆಯಬೇಕಾದಲ್ಲಿ ಸದಸ್ಯರು ಸಹಕಾರಿಯ ಮೇಲೆ ಇಟ್ಟಂತಹ ಪ್ರೀತಿ–ವಿಶ್ವಾಸ, ನಿರ್ದೇಶಕರ ಅವಿರತ ಪ್ರಯತ್ನ, ಹಿತೈಷಿಗಳ ಸ್ಫೂರ್ತಿದಾಯಕ ಬೆಂಬಲ, ಸಿಬ್ಬಂದಿ ವರ್ಗದವರ ಪ್ರಾಮಾಣಿಕ, ನಿಸ್ವಾರ್ಥ ಹಾಗೂ ಅವಿರತ ಸೇವೆಯೇ ಕಾರಣ.

**ಅಂಗ ಸಂಸ್ಥೆಗಳು–**

**ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ. (ಬಹುರಾಜ್ಯ)**

ಯಕ್ಸಂಬಾ ಗ್ರಾಮ ದೇವರಾದ ಶ್ರೀ ಬೀರೇಶ್ವರ ಹೆಸರಿನಲ್ಲಿ 1991 ರಲ್ಲಿ ಸಂಸ್ಥೆಯು ಪ್ರಾರಂಭವಾಯಿತು. ಹಳೆಯ ಪದ್ದತಿಯ ಆರ್ಥಿಕ ವ್ಯವಸ್ಥೆಯನ್ನು ಬದಲಾವಣೆಗೆ ಒಳಪಡಿಸಿ, ಸಹಕಾರ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸುವುದರೊಂದಿಗೆ ಸದಸ್ಯರೆಲ್ಲರನ್ನು ಡಿಜಿಟಲ್ ಜಗತ್ತಿನತ್ತ ಒಲೈಸುವ ಕಾರ್ಯ ಈ ಸಂಸ್ಥೆ ಮಾಡುತ್ತಾ ಬಂದಿದೆ. ಸಹಕಾರ ಸಂಘಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ, ಹಲವಾರು ನೂತನ ಜನಪರ ಯೋಜನೆಗಳನ್ನು ಸದಸ್ಯರಿಗೆ ಪರಿಚಯಿಸಿದೆ. ಸಂಸ್ಥೆಯು ಬಹುರಾಜ್ಯ ಸಹಕಾರಿ ಸಂಘಗಳ ಕಾಯ್ದೆ 2002ರಡಿ ನೋಂದಣಿಗೊಂಡು ಇಂದು ಕರ್ನಾಟಕದಲ್ಲಿ 176, ಮಹಾರಾಷ್ಟ್ರದಲ್ಲಿ 46 ಮತ್ತು ಗೋವಾ 4 ಹೀಗೆ ಒಟ್ಟು 226 ಶಾಖೆಗಳನ್ನು ಹೊಂದಿದೆ.

**ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ–**

ಸಂಘವು ಹಂತ ಹಂತವಾಗಿ ರೈತರ ಹಿತಾಸಕ್ತಿಯನ್ನು ಕಾಪಾಡುತ್ತಾ ಆಧುನಿಕತೆಗೆ ಹೊಂದಿಕೊಂಡ ಕೃಷಿ ಪದ್ದತಿಯ ಅರಿವನ್ನು ರೈತರಿಗೆ ಮೂಡಿಸುತ್ತಾ , ರೈತರಿಗೆ ಬೇಕಾಗುವ ಗೊಬ್ಬರ, ಕೀಟನಾಶಕ ಔಷಧಗಳು ನೀರಾವರಿಗೆ ಸಂಬಂಧಪಟ್ಟ ಸಲಕರಣೆಗಳನ್ನು ಯೋಗ್ಯ ದರದಲ್ಲಿ ಪೂರೈಸಲಾಗುತ್ತದೆ. ಅಲ್ಲದೆ ಮಣ್ಣು, ನೀರು ತಪಾಸಣೆ ಜೊತೆಗೆ ತಜ್ಞರಿಂದ ಆಧುನಿಕ ಪದ್ಧತಿಯ ಕೃಷಿಯ ಬಗ್ಗೆ ಆಗಾಗ ಸೂಕ್ತ ಮಾರ್ಗದರ್ಶನವನ್ನು ರೈತರಿಗೆ ನೀಡಲಾಗುತ್ತಿದೆ.

**ಜೊಲ್ಲೆ ಎಜ್ಯುಕೇಶನ್ ಸೊಸಾಯಿಟಿ–**

ಈ ಸಂಸ್ಥೆಯು ಗಡಿ ಭಾಗಗಳಾದ ಯಕ್ಸಂಬಾ, ನಣದಿ ಹಾಗೂ ನಿಪ್ಪಾಣಿ ಶಿಕ್ಷಣ ಸಂಕುಲದಲ್ಲಿ ಅತ್ಯಾಧುನಿಕ ಸೌಕರ್ಯಗಳನ್ನು ಹೊಂದಿ, ನಗರ ಪ್ರದೇಶದ ಮಕ್ಕಳಿಗೆ ಸಿಗುವಂತಹ ಉನ್ನತ ಶ್ರೇಣಿಯ ಮೂಲಭೂತ ಸೌಕರ್ಯಗಳನ್ನು ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಾ ಬಂದಿದೆ. ಎಲ್.ಕೆ.ಜಿ. ಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮ ಶಾಲೆ, ಸಿ.ಬಿ.ಎಸ್.ಇ. ಪಬ್ಲಿಕ್ ಶಾಲೆ, ಪದವಿ ಪೂರ್ವ, ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಶಿಕ್ಷಣದ ವಿವಿಧ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ನಣದಿ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ಸುಸಜ್ಜಿತ ವಸತಿ ನಿಲಯಗಳನ್ನು ಕಲ್ಪಿಸಲಾಗಿದೆ. ಆಶಾಜ್ಯೋತಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯನ್ನು ತೆರೆದು ವಿಶೇಷ ಮಕ್ಕಳಿಗೆ ಸಾಮಾನ್ಯ ಮಕ್ಕಳಂತೆ ಬೆಳವಣಿಗೆ ಹೊಂದಲು ತಜ್ಞ ಶಿಕ್ಷಕರಿಂದ ತರಬೇತಿ ನೀಡಲಾಗುತ್ತಿದೆ. ಅವರಿಗೆ ಉಚಿತ ವಸತಿ ಸೌಲಭ್ಯವನ್ನು ಕೂಡಾ ಕಲ್ಪಿಸಲಾಗಿದೆ. ಪ್ರಸ್ತುತ ಸನ್ 2025–26ನೇ ಶೈಕ್ಷಣಿಕ ವರ್ಷದಿಂದ ನಿಪ್ಪಾಣಿಯ–ನಾಂಗನೂರ ಶಿಕ್ಷಣ ಸಂಕುಲದಲ್ಲಿ ನೂತನವಾಗಿ BCA ಪದವಿ ಕೋರ್ಸ್ ನ್ನು ಪ್ರಾರಂಭಿಸಲಾಗುತ್ತಿದೆ.

**ನೂತನವಾಗಿ ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ಪದವಿ ಪೂರ್ವ ವಸತಿಯುತ ವಿಜ್ಞಾನ ಮಹಾವಿದ್ಯಾಲಯ ಸ್ಥಾಪನೆ**

ಗ್ರಾಮೀಣ ಭಾಗದ ಎಸ್. ಎಸ್. ಎಲ್. ಸಿ ಉತ್ತೀರ್ಣರಾದ ಮಕ್ಕಳಿಗೆ ಕನಸಾಗಿ ಉಳಿದಿದ್ದ JEE, NEET ಮತ್ತು CET ಪರೀಕ್ಷೆಗಳ ತರಬೇತಿಯನ್ನು ಯಶಸ್ವಿಯಾಗಿ ಪೂರೈಸುವ ನಿಟ್ಟಿನಲ್ಲಿ ಗಡಿಭಾಗವಾದ ನಿಪ್ಪಾಣಿಯ–ನಾಂಗನೂರನಲ್ಲಿ ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ಪದವಿ ಪೂರ್ವ ವಿಜ್ಞಾನ ವಸತಿ ಮಹಾವಿದ್ಯಾಲಯವನ್ನು ನೂತನವಾಗಿ ಪ್ರಾರಂಭಿಸುತ್ತಿರುವುದು ಹೆಮ್ಮೆಯ ವಿಷಯ. ಪ್ರಸ್ತುತ ಸನ್ 2025–26 ನೇ ಶೈಕ್ಷಣಿಕ ಸಾಲಿನಿಂದ ಸುಸಜ್ಜಿತ ಹಾಗೂ ಆಧುನಿಕ ಸೌಲಭ್ಯ ಹೊಂದಿದ ಕಟ್ಟಡದಲ್ಲಿ ಕಾರ್ಯಾರಂಭ ಮಾಡುತ್ತಿರುವ ಈ ಅಂಗ ಸಂಸ್ಥೆ ವಿದ್ಯಾಕಾಂಕ್ಷಿಗಳಿಗೆ ದಾರಿದೀಪವಾಗಲಿದೆ.

**ಪ್ರೇರಣಾ ಉತ್ಸವ**

ಕಳೆದ 13 ವರ್ಷಗಳಿಂದ ಡಿಸೆಂಬರ ತಿಂಗಳಲ್ಲಿ ಪ್ರೇರಣಾ ಉತ್ಸವವನ್ನು ಅತೀ ವಿಜೃಂಭನೆಯಿಂದ ವಿವಿಧ ಸಾಂಸ್ಕೃತಿಕ, ಸಾಂಪ್ರದಾಯಿಕ, ಚಟುವಟಿಕೆಗಳೊಂದಿಗೆ ಜರುಗಿಸುವುದರೊಂದಿಗೆ ಸಂಸ್ಥೆಯ ಪ್ರೇರಣಾ ಶಕ್ತಿಯಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಅವರ ಹುಟ್ಟು ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾ ಬಂದಿದೆ. ಈ ಉತ್ಸವದಲ್ಲಿ ವಿಶೇಷವಾಗಿ ವಿಕಲಚೇತನರ ಸಾಧನೆಯನ್ನು ಗುರುತಿಸಿ ಪ್ರೇರಣಾ ಪುರಸ್ಕಾರವನ್ನು ನೀಡಿ ಗೌರವಿಸುತ್ತಾ ಬಂದಿದೆ. ಸಾಮೂಹಿಕ ಗುಗ್ಗುಳೋತ್ಸವವು ಈ ಉತ್ಸವದ ವಿಶೇಷ ಆಕರ್ಷಣೀಯ ಕಾರ್ಯಕ್ರಮವಾಗಿರುತ್ತದೆ. ಭಾರತೀಯ ಸಂಸ್ಕೃತಿ, ಕಲೆ, ಸಾಹಿತ್ಯವನ್ನು ಉಳಿಸಿ ಬೆಳೆಸುವ ಕಾರ್ಯ ಜೊಲ್ಲೆ ಗ್ರೂಪ್ ಮಾಡುತ್ತಿದೆ.

ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಗಳು ವಿವಿಧ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುವಲ್ಲಿ ನಿರಂತರ ಸಹಾಯ ಸಹಕಾರ ನೀಡುತ್ತಿರುವ ಎಲ್ಲ ಸದಸ್ಯ ಬಾಂಧವರಿಗೂ, ಗ್ರಾಹಕರಿಗೂ, ನಿರ್ದೇಶಕ ಮಂಡಳಿಯ ಸದಸ್ಯರಿಗೂ, ಶಾಖಾ ಸಲಹಾ ಸಮಿತಿ ಸದಸ್ಯರಿಗೂ, ಸಿಬ್ಬಂದಿ ವರ್ಗದವರಿಗೂ, ಹಿತಚಿಂತಕರಿಗೂ ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲ ಮಹನೀಯರಿಗೂ ಧನ್ಯವಾದಗಳು. ಮುಂಬರುವ ದಿನಮಾನಗಳಲ್ಲಿ ಇದೇ ರೀತಿಯ ಸಹಾಯ ಸಹಕಾರ ಇರಲೇಂದು ಆಶಿಸುತ್ತೇವೆ.

ಜೈ ಸಹಕಾರ

**ಶ್ರೀ. ಅಣ್ಣಾಸಾಹೇಬ ಶಂಕರ ಜೊಲ್ಲೆ**

ಸಂಸ್ಥಾಪಕರು ಜೊಲ್ಲೆ ಗ್ರೂಪ್ ಯಕ್ಸಂಬಾ,

ಶ್ರೀ ಜ್ಯೋತಿ

## ಜ್ಯೋತಿ ಕ್ರೆಡಿಟ್ ಶಾಖೆಗಳು

| ಬೆಳಗಾವಿ ಜಿಲ್ಲೆ | | |
|---|---|---|
| 1. | ಯಕ್ಸಂಬಾ | 9900559867 |
| 2. | ಶಿವಾಪೂರವಾಡಿ | 7338059004 |
| 3. | ಭಿರಡಿ | 7348859003 |
| 4. | ಸೋಲ್ಲಾಪೂರ | 7349088004 |
| 5. | ಜಲಾಲಪೂರ | 7348979005 |
| 6. | ಘಟಪ್ರಭಾ | 7348961006 |
| 7. | ಮಾಂಜರಿ | 9606992007 |
| 8. | ಉಗಾರ ಬುದ್ರುಕ | 9606992008 |
| 9. | ಐಗಳಿ | 9606992009 |
| 10. | ಅಳಗವಾಡಿ | 9606992010 |
| 11. | ಸತ್ತಿ | 9972292011 |
| 12. | ಅಂಕಲಿ | 9606978512 |
| 13. | ಶಮನೇವಾಡಿ | 9606978513 |
| 14. | ಹೆಬ್ಬಾಳ | 9606700914 |
| 15. | ನಿಡಸೋಶಿ | 9606400915 |
| 16. | ಮುಗಳಖೋಡ | 9606400816 |
| 17. | ಬೂದಿಹಾಳ | 9606500817 |
| 18. | ಕುಲಗೋಡ | 9606400818 |
| 19. | ಹಳ್ಳೂರ | 9606400819 |
| 20. | ಹಂದಿಗುಂದ | 9606400820 |
| 21. | ನಾಗನೂರ | 9606400821 |
| 22. | ಕಾಕತಿ | 9663702322 |
| 23. | ಪಾಶ್ಚಾಪೂರ | 9663703123 |
| 24. | ಅಂಕಲಗಿ | 9663752324 |
| 25. | ಖಡಕಲಾಟ | 9663782225 |
| 26. | ಮುರಗೋಡ | 9663752526 |
| 27. | ಮಣಗುತ್ತಿ | 9606044527 |
| 28. | ಬೆಳವಡಿ | 9606044530 |
| 29. | ಎಮ್.ಕೆ.ಹುಬ್ಬಳ್ಳಿ | 9606044531 |
| 30. | ಬೆಳಗಾವಿ–1 (ಮಹಾಂತೇಶ ನಗರ) | 9606044532 |
| 31. | ಕೊಕಟನೂರ | 9606044534 |
| 32. | ನೇಸರಗಿ | 9606044536 |
| 33. | ಸುಲ್ತಾನಪೂರ | 9606044540 |
| 34. | ಹಿರೇಬಾಗೇವಾಡಿ | 9731571746 |
| 35. | ಇಟಗಿ | 9606914647 |
| 36. | ಗೋಕಾಕ | 9606914648 |
| 37. | ಸಂಕೇಶ್ವರ | 9606914649 |
| 38. | ಅನಂತಪೂರ | 9606914654 |
| 39. | ಬೆಳಗಾವಿ–2 (ಶಹಾಪೂರ) | 9606914655 |
| 40. | ಮಮದಾಪೂರ | 9900683756 |
| 41. | ಗುಡಸ | 9900658757 |
| 42. | ಮದಭಾವಿ | 9900658958 |
| 43. | ದಡ್ಡಿ | 9900658561 |
| 44. | ಘೋಡಗೇರಿ | 9900644862 |
| 45. | ನಾಯಿಂಗ್ಲಜ | 9900374863 |

| ವಿಜಯಪೂರ ಜಿಲ್ಲೆ | | |
|---|---|---|
| 1. | ವಿಜಯಪೂರ | 9606044533 |
| 2. | ಇಂಡಿ | 9606044528 |
| 3. | ಆಲಮೇಲ | 9606044529 |
| 4. | ಮುದ್ದೇಬಿಹಾಳ | 9606044539 |
| 5. | ನಾಲತವಾಡ | 9731578642 |
| 6. | ನಿಡಗುಂದಿ | 9731578643 |

| ಬಾಗಲಕೋಟ ಜಿಲ್ಲೆ | | |
|---|---|---|
| 1. | ಢವಳೇಶ್ವರ | 9606044535 |
| 2. | ಅಮೀನಗಡ | 9606044537 |
| 3. | ಬಾಗಲಕೋಟ | 9606044538 |
| 4. | ಕಮತಗಿ | 9731578641 |
| 5. | ಹುನ್ನೂರ | 8861554344 |
| 6. | ಜಗದಾಳ | 9731578645 |
| 7. | ಬೆಳಗಲಿ | 9606914652 |
| 8. | ಬಾದಾಮಿ | 9606914653 |
| 9. | ಮುಧೋಳ | 9900652859 |
| 10. | ಲೋಕಾಪುರ | 9900641960 |

| ಗದಗ ಜಿಲ್ಲೆ | | |
|---|---|---|
| 1. | ಗಜೇಂದ್ರಗಡ | 9606914650 |

| ಧಾರವಾಡ ಜಿಲ್ಲೆ | | |
|---|---|---|
| 1. | ನವಲಗುಂದ | 9606914651 |

## ಜ್ಯೋತಿ ಬಜಾರ ಶಾಖೆಗಳು

| | | |
|---|---|---|
| 1. | ಯಕ್ಸಂಬಾ | 7022589483 |
| 2. | ಯಕ್ಸಂಬಾ–2 | 8197534777 |
| 3. | ಸದಲಗಾ | 9740024625 |
| 4. | ಭೋಜ | 9900559868 |
| 5. | ಗಳತಗಾ | 9686503416 |
| 6. | ಚಿಕ್ಕೋಡಿ | 9900559872 |
| 7. | ಸಂಕೇಶ್ವರ | 9900553061 |
| 8. | ನಣದಿ | 9686500580 |
| 9. | ಸಿ.ಬಿ.ಕೆ.ಎಸ್.ಎಸ್.ಕೆ. | 9900559871 |
| 10. | ಕೇರೂರ | 8861786946 |
| 11. | ಅಂಕಲಿ | 8861786949 |
| 12. | ನಿಪ್ಪಾಣಿ–1 | 9900649871 |
| 13. | ನಿಪ್ಪಾಣಿ–2 (ಹಾಲಸಿದ್ಧನಾಥ) | 9900279364 |

## ಇತರೆ ಶಾಖೆಗಳು

| | | |
|---|---|---|
| 1. | ಬಟ್ಟೆ ವಿಭಾಗ, ಯಕ್ಸಂಬಾ | 7022589482 |
| 2. | ಮೆಡಿಕಲ್ ವಿಭಾಗ, ಯಕ್ಸಂಬಾ | 9900559869 |
| 3. | ಪ್ರಿಂಟಿಂಗ್ ಪ್ರೆಸ್, ನಣದಿ | 7760983792 |
| 4. | ಹೊಲಸೆಲ್ ನಿಪ್ಪಾಣಿ | 7338059003 |
| 5. | ಹೊಲಸೆಲ್ ಯಕ್ಸಂಬಾ | 9900559866 |

# AUDIT CERTIFICATE
# 2024-2025

ಶ್ರೀ ಜ್ಯೋತಿ

**To,**

**The Members,**

**SHRI JYOTI VIVIDH UDDESHAGALA SOUHARD SAHAKARI SANGH NYT., EXAMBA.**

**Tal: Chikodi, Dist: Belgaum.**

We have audited the attached Balance Sheet of SHRI JYOTI VIVIDH UDDESHAGALA SOUHARD SAHAKARI SANGH NYT., EXAMBA Tal: CHIKODI. Dist: BELGAVI. as at 31st March 2025. and Profit and Loss Account for the period ended on that date. These financial statements are the responsibility of the Management of SHRI JYOTI VIVIDH UDDESHAGALA SOUHARD SAHAKARI SANGH NYT.,EXAMBA. Our responsibility is to express an opinion on these financial statements based on our Audit.

We have conducted the Audit in accordance with the Audit Standards generally accepted in India. Those standards require that we plan and perform the Audit to obtain the reasonable assurance about whether the financial statements are free of material misstatements. An audit includes examining on text basis, evidence supporting the amounts and disclosures in the financial statements. An audit also includes assessing the Accounting principles used and significant estimates made by the Management, as well as evaluating financial statements presentation, we believe that our Audit provides reasonable basis for our opinion.

The Balance Sheet and Profit & Loss Account have been drawn up in prescribed forms under the Karnataka Souharda Sahakari Act, 1997, and are in conformity with the generally accepted Accounting principles in India.

To the best of our knowledge and according to the information and explanation given to us and as shown by the books of the Souharda and read together with the accounting policies, we report that:

1) We have obtained all the information and explanation, which to the best of our knowledge and belief were necessary for the purpose of our audit.

2) In our opinion, proper books of account as required by law have been kept by the Souharda Co-operative so far as it appears from our examination.

3) The Balance Sheet and Profit & Loss Account dealt with by this report are in agreement with the books of account and are drawn up in conformity with the law.

4) The transactions of the said Souharda, which have come to our notice, have been within the competence of the co-operative.

5) Subject to :

Notes forming part of the accounts and our comments & observations contained in the audit memorandum.

We report that in our opinion and to the best of our information and according to the explanation given to us, subject to the comments in our detailed Audit Report, the accounts give a true and fair view :

a) In the case of Balance Sheet, the state of affairs of the Souharda Co-operative as at 31st March 2025, and

b) In the case of Profit & Loss Account, of the Net Profit for the year ended on that date.

**For M/s MARATHE HARGUDE & Co.**
**Chartered Accountants (FRN-002008S)**

BELAGAVI.
DATE : 15 - 04 - 2025

**CA Sanil Hargude**
**Partner (M.No.229583)**

ಶ್ರೀ ಜ್ಯೋತಿ

## ಸನ್ಮಾನ್ಯ ಸಹಕಾರಿ ಸಂಘದ ಸದಸ್ಯ ಬಾಂಧವರೇ,

ನಮ್ಮ ಸಹಕಾರಿ ಸಂಘದ 31ನೇ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಮಾರ್ಚ 2024–25ನೇ ಸಾಲಿಗೆ ಕೊನೆಗೊಂಡ ಆರ್ಥಿಕ ವರ್ಷದ ಲೆಕ್ಕ ಪತ್ರದ ಹಾಗೂ ವ್ಯವಹಾರದ ವರದಿಯನ್ನು ದಿಗ್ದರ್ಶಕ ಮಂಡಳಿಯ ಪರವಾಗಿ ತಮ್ಮ ಮುಂದೆ ಮಂಡಿಸುತ್ತಿದ್ದು, ಅದಕ್ಕೆ ತಮ್ಮ ಅನುಮೋದನೆಯನ್ನು ಕೋರುತ್ತೇನೆ. ಸಹಕಾರಿ ಸಂಘದ ಸಂಸ್ಥಾಪಕರು ಮತ್ತು ಮಾಜಿ–ಸಂಸದರು ಆದ ಮಾನ್ಯ ಶ್ರೀ. ಅಣ್ಣಾಸಾಹೇಬ ಶಂ. ಜೊಲ್ಲೆ ಇವರ ಮುಂದಾಳತ್ವದಲ್ಲಿ ಹಾಗೂ ಸಹ–ಸಂಸ್ಥಾಪಕರು ಮತ್ತು ನಿಪ್ಪಾಣಿಯ ಶಾಸಕರಾದ ಮಾನ್ಯ ಸೌ. ಶಶಿಕಲಾ ಅ. ಜೊಲ್ಲೆ ಇವರ ಸೂಕ್ತ ಮಾರ್ಗದರ್ಶನದಲ್ಲಿ ಕರ್ನಾಟಕ ರಾಜ್ಯಾದ್ಯಂತ ಜನಮನ್ನಣೆ ಗಳಿಸಿದ ಸಹಕಾರಿ ಸಂಘವು ವರ್ಷದಿಂದ ವರ್ಷಕ್ಕೆ ಆಧುನಿಕತೆಗೆ ಅನುಗುಣವಾಗಿ ಸಾಧನೆಯ ಗುರಿ ಮೀರಿ ಮುನ್ನಡೆದಿದೆ. ಈ ಅಮೋಘ ಬೆಳವಣಿಗೆಗೆ ಸದಸ್ಯರು ಸಹಕಾರಿ ಸಂಘದ ಮೇಲೆ ಇಟ್ಟ ವಿಶ್ವಾಸ, ಸಂಚಾಲಕ ಮಂಡಳಿಯವರ ಮಾರ್ಗದರ್ಶನ, ಸಿಬ್ಬಂದಿ ವರ್ಗದವರ ಪ್ರಾಮಾಣಿಕ ಮತ್ತು ಅವಿರತ ಸೇವೆಯೇ ಕಾರಣ ಎಂದು ಹೇಳಲು ಈ ಕೆಳಗಿನ ಸಂಕ್ಷಿಪ್ತ ವರದಿಯ ಮೇಲೆ ಖಚಿತವಾಗುತ್ತದೆ.

**ಸದಸ್ಯರು**

ದಿನಾಂಕ 31–03–2024 ರ ಆರ್ಥಿಕ ವರ್ಷದ ಕೊನೆಗೆ ಸದಸ್ಯರ ಸಂಖ್ಯೆ 37,543 ಇದ್ದದ್ದು, ದಿ: 31–03–2025 ಕ್ಕೆ ಒಟ್ಟು ಸದಸ್ಯರ ಸಂಖ್ಯೆ 43,176 ಏರಿಕೆಯಾಗಿದೆ. ಅಂದರೆ 5,633 ಜನ ನೂತನವಾಗಿ ಸದಸ್ಯತ್ವವನ್ನು ಹೊಂದಿದ್ದಾರೆ.

**ಶೇರಬಂಡವಾಳ**

ಆರ್ಥಿಕ ವರ್ಷ 31–03–2025 ರ ಕೊನೆಗೆ ನಮ್ಮ ಸಹಕಾರಿ ಸಂಘದ ಶೇರು ಬಂಡವಾಳ ರೂ. 2 ಕೋಟಿ 38 ಲಕ್ಷ 98 ಸಾವಿರ ಇರುತ್ತದೆ. ಕಳೆದ ವರ್ಷಕ್ಕೆ ಹೋಲಿಸಲಾಗಿ ರೂ. 35 ಲಕ್ಷ 40 ಸಾವಿರ ರಷ್ಟು ಹೆಚ್ಚಳವಾಗಿದೆ.

**ನಿಧಿಗಳು**

ಆರ್ಥಿಕ ವರ್ಷದ ಕೊನೆಗೆ ಕಾಯ್ದಿಟ ನಿಧಿ, ಕಟ್ಟಡ ನಿಧಿ, ಶಿಕ್ಷಣ ನಿಧಿ, ಸದಸ್ಯರ ಕ್ಷೇಮ ನಿಧಿ, ನೌಕರರ ಕ್ಷೇಮ ನಿಧಿ, ಸವಕಳಿ ನಿಧಿ, ಹಾಗೂ ಇನ್ನುಳಿದ ನಿಧಿಗಳು ಸೇರಿ ಒಟ್ಟು ರೂ 10 ಕೋಟಿ 47 ಲಕ್ಷ 73 ಸಾವಿರ ಜಮಾ ಇರುತ್ತದೆ.

**ಠೇವು**

ದಿ. 31–03–2024 ರ ಆರ್ಥಿಕ ವರ್ಷದ ಕೊನೆಗೆ 286 ಕೋಟಿ 59 ಲಕ್ಷ ಇದ್ದ ವಿವಿಧ ಠೇವುಗಳು ದಿ. 31–03–2025 ಕ್ಕೆ 331 ಕೋಟಿ 83 ಲಕ್ಷ ಆಗಿರುತ್ತದೆ. ಅಂದರೆ ಸುಮಾರು 45 ಕೋಟಿ 24 ಲಕ್ಷ ರೂ. ಠೇವು ಸಂಗ್ರಹಣೆ ಹೆಚ್ಚಾಗಿದ್ದು, ದಾಖಲೆಯ ಠೇವು ಸಂಗ್ರಹ ಶೇ. 15.79% ರಷ್ಟು ಹೆಚ್ಚಳವಾಗಿದೆ.

**ಸಾಲ ಮತ್ತು ಮುಂಗಡಗಳು**

ಸಹಕಾರಿ ಸಂಘದ ಸದಸ್ಯರಿಗೆ ಸದಸ್ಯ ಸಾಲ, ಮಾಧ್ಯಮಿಕ ಸಾಲ, ವಾಹನ ಸಾಲ, ನಗದು ಪತ್ತಿನ ಸಾಲ, ಜೆ.ಸಿ.ಸಿ. ಸಾಲ ಜ್ಯೋತಿ ಕಿರು ಸಾಲ, ಬಂಗಾರದ ಸಾಲ ಇತ್ಯಾದಿ ಸಾಲ ನೀಡುತ್ತಿದ್ದು ದಿನಾಂಕ : 31–03–2024 ಕ್ಕೆ 129 ಕೋಟಿ 76 ಲಕ್ಷ ರೂ. ಇದ್ದ ಸಾಲವು ದಿನಾಂಕ 31–03–2025 ಕ್ಕೆ 163 ಕೋಟಿ 85 ಲಕ್ಷ ರೂ. ಆಗಿರುತ್ತದೆ. ಅಂದರೆ ಸುಮಾರು 34 ಕೋಟಿ 08 ಲಕ್ಷ ರೂ ಹೆಚ್ಚಿಗೆ ಸಾಲವನ್ನು ಪ್ರಸಕ್ತ ವರ್ಷದಲ್ಲಿ ವಿತರಿಸಲಾಗಿದೆ.

**ಗುಂತಾವಣಿಗಳು**

ವಿವಿಧ ಸಂಘ–ಸಂಸ್ಥೆಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ವಿನಿಯೋಗಿಸಿದ ಗುಂತಾವಣಿ ಹಾಗೂ ಕರೆ ಮುದ್ದತ್ ಠೇವು ಸೇರಿ ದಿನಾಂಕ 31–03–2025 ಕ್ಕೆ ಒಟ್ಟು 130 ಕೋಟಿ 09 ಲಕ್ಷ ಇರುತ್ತದೆ.

**ಖರೀದಿ**

ದಿನಾಂಕ 31–03–2025 ಕ್ಕೆ 29 ಕೋಟಿ 88 ಲಕ್ಷ ರೂ. ಪ್ರಸಕ್ತ ವರ್ಷದಲ್ಲಿ ಖರೀದಿಯಾಗಿರುತ್ತದೆ.

**ಮಾರಾಟ**

ದಿನಾಂಕ 31–03–2025 ಕ್ಕೆ 33 ಕೋಟಿ 53 ಲಕ್ಷ ರೂ. ಪ್ರಸಕ್ತ ವರ್ಷದಲ್ಲಿ ಮಾರಾಟವಾಗಿರುತ್ತದೆ.

**ಲಾಭ**

ಆರ್ಥಿಕ ವರ್ಷ 2024–25 ರಲ್ಲಿ ರೂ 01 ಕೋಟಿ 72 ಲಕ್ಷ ಲಾಭ ಆಗಿರುತ್ತದೆ.

**ಶಾಖೆಗಳು**

ಸಹಕಾರಿ ಸಂಘವು ಕರ್ನಾಟಕ ರಾಜ್ಯಾದ್ಯಂತ ಒಟ್ಟಾರೆ 81 ಶಾಖೆಗಳನ್ನು ಹೊಂದಿದ್ದು. ಜಿಲ್ಲಾವಾರು ಶಾಖೆಗಳ ವಿವರ :
ಬೆಳಗಾವಿ ಜಿಲ್ಲೆ – 63, ಧಾರವಾಡ ಜಿಲ್ಲೆ – 01, ಬಾಗಲಕೋಟ ಜಿಲ್ಲೆ– 10, ವಿಜಯಪುರ ಜಿಲ್ಲೆ – 06, ಗದಗ ಜಿಲ್ಲೆ – 01.
ಶಾಖಾ ಸಲಹಾ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸಲಹಾ ಸಮಿತಿ ಸದಸ್ಯರ ಮಾರ್ಗದರ್ಶನದಲ್ಲಿ ಮತ್ತು ಸಿಬ್ಬಂದಿ ವರ್ಗದವರ ಅವಿರತ ಸೇವೆ ಹಾಗೂ ಸದಸ್ಯರ ಪ್ರೀತಿ ವಿಶ್ವಾಸದಿಂದ ಶಾಖೆಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಲು ಅತೀವ ಸಂತೋಷವೆನಿಸುತ್ತದೆ.

**ಆಡಳಿತ ಸಭೆ**

ವರದಿ ವರ್ಷದಲ್ಲಿ ಆಡಳಿತ ಕಛೇರಿಯ ನಿರ್ದೇಶಕ ಮಂಡಳಿಯ 31 ಸಭೆಗಳು ಮತ್ತು ಸಾಲ ಸಮಿತಿಯ 20 ಸಭೆಗಳು ನಡೆದಿರುತ್ತವೆ ಹಾಗೂ ಎಲ್ಲಾ ಶಾಖೆಗಳ ಸಲಹಾ ಸಮಿತಿಯ ಸದಸ್ಯರು ಸಭೆಗಳನ್ನು ಜರುಗಿಸಿ ಸಂಸ್ಥೆಯ ದೈನಂದಿನ ಕಾರ್ಯಗಳಲ್ಲಿ ಭಾಗವಹಿಸಿ, ಸಹಕಾರಿ ಸಂಘದ ಪ್ರಗತಿಪಥದತ್ತ ನಡೆಸುವಲ್ಲಿ ಮಹತ್ವದ ಪಾತ್ರ ವಹಿಸಿರುತ್ತಾರೆ.

**ಕೋರ್ ಬ್ಯಾಂಕಿಂಗ್ ವ್ಯವಸ್ಥೆ– ಗಣಕೀಕರಣ**

ಡಾಟಾ ಸೆಂಟರ್‌ಗಳ ಮೂಲಕ ಕೋರ್ ಅರ್ಥ ವ್ಯವಸ್ಥೆಯನ್ನು 63 ಶಾಖೆಗಳಲ್ಲಿ ಅಳವಡಿಸುವದರ ಮೂಲಕ ಸಹಕಾರ ಕ್ಷೇತ್ರದಲ್ಲಿ ಹೊಸ ಹೆಜ್ಜೆಯನ್ನು ಇಟ್ಟಿದ್ದೇವೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಕೋರ್ ಅರ್ಥವ್ಯವಸ್ಥೆಯಲ್ಲಿ ಗ್ರಾಹಕರು ಯಾವುದೇ ಶಾಖೆಯಿಂದ ಹಣ ವರ್ಗಾವಣೆ ಹಾಗೂ ಜಮಾ ಮಾಡಬಹುದಾಗಿದೆ. ಬ್ಯಾಂಕುಗಳ ಸಹಯೋಗದೊಂದಿಗೆ ನಮ್ಮ ಸದಸ್ಯ ಗ್ರಾಹಕರು ತಮ್ಮ ಖಾತೆಯಿಂದ ಯಾವುದೇ ಬ್ಯಾಂಕಿಗೆ NEFT & RTGS ಮುಖಾಂತರ ಹಣ ವರ್ಗಾವಣೆ ಮಾಡಬಹುದಾಗಿದೆ. ಅದೇ ರೀತಿ ರಾಷ್ಟ್ರೀಕೃತ ಬ್ಯಾಂಕ ಮತ್ತು ಪ್ರೈವೆಟ್ ಬ್ಯಾಂಕುಗಳಿಂದ ನಮ್ಮ ಸಹಕಾರಿ ಸಂಘದ ಉಳಿತಾಯ ಹಾಗೂ ಚಾಲತಿ ಖಾತೆಗಳಿಗೆ NEFT & RTGS, IMPS(Inward) ಮಾಡಬಹುದಾಗಿದೆ. ಸಾಲವನ್ನು ತ್ವರಿತಗತಿಯಲ್ಲಿ ಗ್ರಾಹಕರಿಗೆ ಮಂಜೂರು ಮಾಡುವಗೋಸ್ಕರ ಆನ್‌ಲೈನ್ ಲೋನ್ ಕ್ರೆಡ್‌ಪೂಲ್ ಸಾಫ್ಟವೇರನ್ನು ಪ್ರಾರಂಭಿಸಿದ್ದು. ಈ ಸಾಲ ಸಾಫ್ಟವೇರ ಮುಖಾಂತರ ಗ್ರಾಹಕರಿಗೆ ತ್ವರಿತವಾಗಿ ಸಾಲ ಸೌಲಭ್ಯ ಲಭ್ಯವಾಗುತ್ತಿದೆ. ಸದಸ್ಯ ಗ್ರಾಹಕರಿಗೆ ಪಾರದರ್ಶಕ, ತ್ವರಿತ ಹಾಗೂ ಸ್ಥಳೀಯ ಸೇವೆ ಒದಗಿಸುವುದು ನಮ್ಮ ಸಹಕಾರಿ ಸಂಘದ ಮುಖ್ಯ ಧ್ಯೇಯವಾಗಿದೆ.

**ಸಾಲ ವಸೂಲಾತಿ**

ವರದಿ ವರ್ಷದಲ್ಲಿ ಸಹಕಾರಿ ಸಂಘದ ಸಾಲ ವಸೂಲಾತಿಯು ತೃಪ್ತಿದಾಯಕವಾಗಿದ್ದು, ಸಾಲ ಖಟಬಾಕಿ ಪ್ರಮಾಣವು ಹೆಚ್ಚಾಗದಂತೆ ನಿಗಾವಹಿಸುತ್ತಿದ್ದೇವೆ. ಸಾಲಗಾರರು ನಮ್ಮ ಸಿಬ್ಬಂದಿಯೊಂದಿಗೆ ಸಹಕರಿಸಿ ಸಾಲ ಮರುಪಾವತಿಯನ್ನು ಸಕಾಲದಲ್ಲಿ ಮಾಡಿ ಖಟಬಾಕಿ ಪ್ರಮಾಣವನ್ನು ಕಡಿಮೆಗೊಳಿಸಲು ನಿರ್ದೇಶಕ ಮಂಡಳಿಯ ಪರವಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

**ಅಭಿನಂದನೆಗಳು**

ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಉಪನಿಬಂಧಕರು ಬೆಳಗಾವಿ, ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿಕ್ಕೋಡಿ, ಇವರು ನಮ್ಮ ಸಹಕಾರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಸಂಘದ ಅಭಿವೃದ್ಧಿಗೆ ಸಹಕರಿಸಿದ್ದಕ್ಕಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಸನ್ 2024–25 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯನ್ನು ಮಾಡಿದ ಮೆ॥ ಮರಾಠೆ ಹರಗುಡೆ ಮತ್ತು ಕಂಪನಿ ಚಾರ್ಟರ್ಡ್ ಅಕೌಂಟಂಟ್ ಅವರಿಗೆ ಅಭಿನಂದಿಸುತ್ತಾ, ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಸಹಕರಿಸಿದ್ದಕ್ಕಾಗಿ ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು. ನಮ್ಮ ಸಹಕಾರಿ ಖಾತೆ ಹೊಂದಿದ ಎಲ್ಲ ಬ್ಯಾಂಕುಗಳ ವ್ಯವಸ್ಥಾಪಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಹಣಕಾಸಿನ ವ್ಯವಹಾರಕ್ಕೆ ಸಹಕರಿಸಿದಕ್ಕಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಜೀವ ವಿಮೆ, ಆರೋಗ್ಯ ವಿಮೆ, ಸಾಮಾನ್ಯ ವಿಮೆ ಹಾಗೂ ಮ್ಯುಚ್ಯುವಲ್ ಫಂಡ್ ಕಂಪನಿಗಳ ಎಲ್ಲ ಅಧಿಕಾರಿಗಳಿಗೆ ಮತ್ತು ನಮ್ಮ ಸಹಕಾರಿಯ ಜೊತೆ ಒಡಂಬಡಿಕೆ ಮಾಡಿಕೊಂಡ ಎಲ್ಲ ಕಂಪನಿಗಳ ಅಧಿಕಾರಿಗಳಿಗೂ ಸಹ ಹೃತ್ಪೂರ್ವಕ ಅಭಿನಂದನೆಗಳು. ಸದಸ್ಯರಿಗೆ ಕೊನೆಯದಾಗಿ ನಮ್ಮ ಸಹಕಾರಿಯ ಸರ್ವೋತೋಮುಖ ಅಭಿವೃದ್ಧಿಗೆ ಸಹಾಯಕರಾದ ಸರ್ವ ಸದಸ್ಯ ಗ್ರಾಹಕರಿಗೆ, ಹಿತಚಿಂತಕರಿಗೆ ಋಣಿಯಾಗಿದ್ದೇನೆ. ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುತ್ತಿರುವ ಸಹಕಾರಿಯ ಸರ್ವ ಸಿಬ್ಬಂದಿಗೆ, ನಮ್ಮ ಸಹಕಾರಿಯ ಪ್ರಗತಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲ ಸಂಘ ಸಂಸ್ಥೆಗಳಿಗೂ ಎಲ್ಲ ಮಹಾನುಭಾವಿಗಳಿಗೂ ಚಿರಋಣಿಯಾಗಿದ್ದೇನೆ.

ಜೈ ಸಹಕಾರ

ದಿಗ್ದರ್ಶಕ ಮಂಡಳಿಯ ಪರವಾಗಿ

**ಶ್ರೀ. ಬಾಬುರಾವ ಎನ್. ಮಾಳಿ**

ಅಧ್ಯಕ್ಷರು

## ಸಹಕಾರಿ ಸಂಘದ ಪ್ರಗತಿಯ ನೋಟ

| ಅ. ನಂ. | ವಿವರ | 2022–23 | 2023–24 | 2024–25 |
|---|---|---|---|---|
| 1 | ಸದಸ್ಯರ ಸಂಖ್ಯೆ | 30,677 | 37,543 | 43,176 |
| 2 | ವಸೂಲಾದ ಶೇರ ಬಂಡವಾಳ | 1,56,24,300–00 | 2,03,57,700–00 | 2,38,98,600–00 |
| 3 | ಕಾಯ್ದಿಟ್ಟ ಹಾಗೂ ಇತರ ನಿಧಿಗಳು | 6,09,66,121–25 | 8,14,15,236–51 | 10,47,73,472–61 |
| 4 | ಠೇವುಗಳು | 196,99,72,960–15 | 286,59,22,011–33 | 331,83,26,133–80 |
| 5 | ಸಾಲಗಳು | 98,44,36,448–00 | 129,76,78,690–00 | 163,85,16,781–00 |
| 6 | ಬ್ಯಾಂಕ ಠೇವು–ಗುಂತಾವಣಿಗಳು | 67,09,33,549–79 | 133,40,31,275–34 | 130,09,23,758–24 |
| 7 | ದುಡಿಯುವ ಬಂಡವಾಳ | 204,65,63,381–35 | 296,76,94,947–84 | 344,69,98,206–41 |
| 8 | ಖರೀದಿ | 24,70,20,870–31 | 32,39,64,681–99 | 29,88,71,718–58 |
| 9 | ಮಾರಾಟ | 25,57,97,527–47 | 34,87,92,415–20 | 33,53,13,919–20 |
| 10 | ನಿವ್ವಳ ಲಾಭ | 1,11,23,457–76 | 1,50,21,048–10 | 1,72,69,697–70 |
| 11 | ಶಾಖೆಗಳು | 81 | 81 | 81 |
| 12 | ಲಾಭಾಂಶ ಹಂಚಿದ್ದು | 10% | 10% | (ಸೂಚಿತ) 10% |

# ಸನ್ 2025–26 ನೇ ಸಾಲಿನ ಅಂದಾಜು ಖರ್ಚು ಪತ್ರಿಕೆ

| ಅ. ನಂ. | ವೆಚ್ಚದ ವಿವರಗಳು | 2024–25 ರ ಸೂಚಿತ ಅಂದಾಜು ಖರ್ಚು ರೂ. | 2024–25 ರ ಪ್ರತ್ಯಕ್ಷ ಖರ್ಚು ರೂ. | 2025–26 ರ ಸೂಚಿತ ಅಂದಾಜು ಖರ್ಚು ರೂ. |
|---|---|---|---|---|
| 1. | ಸಿಬ್ಬಂದಿ ವೇತನ ಮತ್ತು ಭತ್ತೆ | 10,00,00,000–00 | 8,79,62,134–00 | 11,00,00,000–00 |
| 2. | ಬ್ಯಾಂಕ ವೆಚ್ಚ ಮತ್ತು ಪಿಗ್ಮಿ ಕಮೀಶನ್ | 7,50,000–00 | 3,07,552–72 | 7,50,000–00 |
| 3. | ಪ್ರವಾಸ ಖರ್ಚು(ನೌಕರರ ಹಾಗೂ ಆಡಳಿತ ಮಂಡಳಿ) | 25,00,000–00 | 13,63,160–00 | 25,00,000–00 |
| 4. | ಕಾಗದ ಮತ್ತು ಮುದ್ರಣ | 30,00,000–00 | 19,66,055–00 | 30,00,000–00 |
| 5. | ಬಾಡಿಗೆ, ವಿಮೆ ಮತ್ತು ಕರ | 1,25,00,000–00 | 1,13,24,956–00 | 1,25,00,000–00 |
| 6. | ಅಡಿಟ ಫೀ | 5,00,000–00 | 2,50,000–00 | 5,00,000–00 |
| 7. | ಸವಕಳಿ | 1,25,00,000–00 | 91,66,971–00 | 1,25,00,000–00 |
| 8. | ಅಂಚೆ ಮತ್ತು ತಂತಿ | 20,00,000–00 | 12,69,465–96 | 20,00,000–00 |
| 9. | ಠೇವುಗಳ ಮೇಲಿನ ಬಡ್ಡಿ | 20,00,00,000–00 | 26,90,64,654–64 | 31,00,00,000–00 |
| 10. | ಜಾಹೀರಾತು | 5,00,000–00 | 1,93,937–00 | 5,00,000–00 |
| 11. | ನೌಕರರ ಭವಿಷ್ಯ ನಿಧಿ, ಉಪಧಾನ ನಿಧಿ ಮತ್ತು ವಿಮೆ | 75,00,000–00 | 28,19,481–23 | 75,00,000–00 |
| 12. | ವಾಹನ ಮತ್ತು ಇತರ ವಿಮೆ | 8,50,000–00 | 4,61,225–00 | 8,50,000–00 |
| 13. | ಕಾನೂನು ಸಲಹೆಗಾರರ ಫೀ | 1,00,000–00 | 5,000–00 | 1,00,000–00 |
| 14. | ಇತರೆ ಖರ್ಚು (ಎ.ಎಮ್.ಸಿ., ಎ.ಜಿ.ಎಂ.) | 60,00,000–00 | 45,17,274–98 | 60,00,000–00 |
| 15. | ಆಡಳಿತ ಮಂಡಳಿ ಸಭಾ ಭತ್ತೆ ಮತ್ತು ವಿಮೆ | 30,00,000–00 | 23,53,422–50 | 30,00,000–00 |
| 16. | ಬ್ಯಾಂಕಿನಿಂದ ಪಡೆದ ಸಾಲದ ಬಡ್ಡಿ | 20,00,000–00 | 91,942–00 | 20,00,000–00 |
| 17. | ಸಾದಿಲವಾರ ಖರ್ಚು | 75,00,000–00 | 57,50,904–81 | 75,00,000–00 |
| 18. | ಆದಾಯ ತೆರಿಗೆಗಳು | 5,00,000–00 | —— | 5,00,000–00 |
| 19. | ವೃತ್ತಿ ಮತ್ತು ಸೇವಾ ತೆರಿಗೆ | 35,00,000–00 | 56,62,198.18 | 60,00,000–00 |
| 20. | ನೊಂದಣಿ ಫೀ, ಪರಿಶೀಲನೆ ಫೀ | 8,00,000–00 | 7,07,439.00 | 8,00,000–00 |
| 21. | **ಲಾಭ** | 2,25,00,000–00 | 1,72,69,697.70 | 2,25,00,000–00 |
| | **ಒಟ್ಟು –** | **38,85,00,000–00** | **42,25,07,471–72** | **51,10,00,000–00** |

**ವಿ.ಸೂಚನೆ :** ಅ. ನಂ. 09, 19, 2024–25 ರ ಅಂದಾಜು ಖರ್ಚಿಗಿಂತ ಹೆಚ್ಚಾಗಿದ್ದರಿಂದ
ತಾವು ಮಂಜೂರು ನೀಡಬೇಕಾಗಿ ವಿನಂತಿ.

## ಸನ್ 2025–26 ನೇ ಸಾಲಿನ ಅಂದಾಜು ಆದಾಯ ಪತ್ರಿಕೆ

| ಅ. ನಂ. | ಆದಾಯದ ವಿವರಗಳು | 2024–25 ರ ಸೂಚಿತ ಅಂದಾಜು ಆದಾಯ | 2024–25 ರ ಪ್ರತ್ಯಕ್ಷ ಆದಾಯ | 2025–26 ರ ಸೂಚಿತ ಅಂದಾಜು ಆದಾಯ |
|---|---|---|---|---|
| 1 | ಸಾಲದ ಮೇಲಿನ ಬಡ್ಡಿ | 20,00,00,000–00 | 25,43,98,825.00 | 30,50,00,000–00 |
| 2 | ಬ್ಯಾಂಕ ಹಾಗೂ ಗುಂತಾವಣಿಯ ಬಡ್ಡಿ | 11,25,00,000–00 | 11,35,01,140.00 | 13,00,00,000–00 |
| 3 | ಶೇಅರ ಫೀ | 5,00,000–00 | 1,16,320.00 | 5,00,000–00 |
| 4 | ಇತರ ಉತ್ಪಾದನಾ ಆದಾಯ | 2,25,00,000–00 | 1,89,67,222.38 | 2,25,00,000–00 |
| 5 | ಇತರ ಸೇವೆಗಳ ಆದಾಯ | 5,00,000–00 | 8,160.00 | 5,00,000–00 |
| 6 | ಇತರ ಆದಾಯ ಮತ್ತು ಸಾದಿಲವಾರ | 1,50,00,000–00 | 50,62,297.57 | 1,50,00,000–00 |
| 7 | ಸದಸ್ಯರ ಪ್ರವೇಶ ಫೀ | 1,00,000–00 | 29,080.00 | 1,00,000–00 |
| 8 | ಕಾಗದ ಮತ್ತು ಮುದ್ರಣ | 15,00,000–00 | 10,16,281.00 | 15,00,000–00 |
| 9 | ವ್ಯಾಪಾರ ಲಾಭ | 3,59,00,000–00 | 2,94,05,145.77 | 3,59,00,000–00 |
| | **ಒಟ್ಟು –** | **38,85,00,000–00** | **42,25,04,471–72** | **51,10,00,000–00** |

## • ನಿವ್ವಳ ಲಾಭ ವಿಭಾಗಣೆ •

ಸನ್ 2024–25 ನೇ ಸಾಲಿನ ನಿವ್ವಳ ಲಾಭ ರೂ. 1,72,69,697–70 ನ್ನು ಈ ಕೆಳಗಿನಂತೆ ವಿಭಾಗಣೆ ಮಾಡಲು ದಿಗ್ದರ್ಶಕ ಮಂಡಳಿಯವರು ಶಿಫಾರಸ್ಸು ಮಾಡಿದ್ದರಿಂದ ಅದಕ್ಕೆ ತಾವು ಅನುಮೋದನೆ ನೀಡಬೇಕಾಗಿ ವಿನಂತಿ.

| ಅ. ನಂ. | ವಿವರ | ಪ್ರತಿಶತ | ಮೊತ್ತ ರೂ. |
|---|---|---|---|
| 1. | ಕಾಯ್ದಿಟ್ಟ ನಿಧಿಗೆ | 25% | 43,17,424–70 |
| 2. | ಸಹಕಾರ ಶಿಕ್ಷಣ ನಿಧಿಗೆ | 02% | 3,45,394–00 |
| 3. | ಅನಿರೀಕ್ಷಿತ ನಷ್ಟಗಳ ಮೀಸಲು | 20% | 34,53,940–00 |
| 4. | ಸಾಮಾನ್ಯ ಕಲ್ಯಾಣ ನಿಧಿ | 05% | 8,63,485–00 |
| 5. | ಸದಸ್ಯರಿಗೆ ಲಾಭಾಂಶ (31-03-2024ರ ಶೇಅರ ಹಣ 2,03,57,700–00 ರ ಮೇಲೆ) | 10% | 20,35,770–00 |
| 6. | ಮೇಲಿನ ಅ.ನಂ. 1,2,3,4 ರಲ್ಲಿ ಹಂಚಿ ಉಳಿದ ಲಾಭ ರೂ. 82,89,454–00 ನ್ನು ಈ ಕೆಳಗಿನಂತೆ ವಿಭಾಗಿಸಿದೆ. | | |
| | 1) ಧರ್ಮಾರ್ಥ ನಿಧಿಗೆ | 10% | 8,28,945–00 |
| | 2) ಕಟ್ಟಡ ನಿಧಿಗೆ | 25% | 20,72,364–00 |
| | 3) ಸದಸ್ಯರ ಕಲ್ಯಾಣ ನಿಧಿಗೆ | 20% | 16,57,891–00 |
| | 4) ನೌಕರರ ಕಲ್ಯಾಣ ನಿಧಿಗೆ | 20% | 16,57,891–00 |
| | 5) ಕಾಯ್ದಿಟ್ಟ ನಿಧಿಗೆ | | 36,593–00 |
| | **ಒಟ್ಟು –** | | **1,72,69,697–70** |

# ಸಾಲಗಾರರಿಗೆ ತಿಳುವಳಿಕೆ

ಶ್ರೀ ಜ್ಯೋತಿ

ಸಹಕಾರಿ ಸಂಘದ ಪ್ರತಿಯೊಬ್ಬ ಸಾಲಗಾರರಿಗೆ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ಸಹಕಾರಿ ಸಂಘಕ್ಕೆ ಭರಣಾ ಮಾಡಬೇಕಾದ ಸಾಲವನ್ನು ನಿಗದಿತ ವೇಳೆಯಲ್ಲಿ ತುಂಬದೇ ಇದ್ದ ಖಟಬಾಕಿ ಸಾಲಗಾರರ ಮೇಲೆ ಕಾನೂನಿನ ಪ್ರಕಾರ ಅನಿವಾರ್ಯವಾಗಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಹಾಗೂ ಮುಂದೆಯೂ ಇದೇ ರೀತಿ ಕಠಿಣ ಕಾನೂನು ಕ್ರಮ ಜರುಗಿಸಿ, ಯಾವುದೇ ಕಾರಣಕ್ಕೂ ಸಹಕಾರಿ ಸಂಘದ ಖಟಬಾಕಿ ಪ್ರಮಾಣ ಹೆಚ್ಚಾಗದಂತೆ ನಿಗಾವಹಿಸುತ್ತಿದ್ದೇವೆ. ಆದ್ದರಿಂದ ತಾವೆಲ್ಲರೂ ಸಹಕರಿಸಿ ಸಾಲವನ್ನು ಸರಿಯಾದ ವೇಳೆಗೆ ಮರುಪಾವತಿಸಬೇಕಾಗಿ ವಿನಂತಿ. ತಮ್ಮ ಸಾಲ ಮತ್ತು ಬಡ್ಡಿಯನ್ನು ಸಕಾಲಕ್ಕೆ ತುಂಬಿ ತಮ್ಮ ಪತ್ತು ಕಾಯ್ದುಕೊಳ್ಳಿರಿ. ತಮ್ಮ ಸಾಲ ಅರ್ಜಿಯ ಜೊತೆಗೆ ಅವಶ್ಯಕ ದಾಖಲಾತಿಗಳನ್ನು ಸಲ್ಲಿಸಬೇಕು. ತಮ್ಮ ಸಾಲದ ಅರ್ಜಿ ಅಪೂರ್ಣವಾದಲ್ಲಿ ಅಂದರೆ ಅವಶ್ಯಕ ದಾಖಲಾತಿಗಳನ್ನು ಒದಗಿಸದಿದ್ದಲ್ಲಿ ತಮಗೆ ಸಾಲ ಮಂಜೂರು ಮಾಡುವುದರಲ್ಲಿ ಅನಾವಶ್ಯಕ ವಿಳಂಬವಾಗುವ ಅಥವಾ ತಿರಸ್ಕರಿಸಲ್ಪಡುವ ಸಾಧ್ಯತೆ ಇದೆ.

**ಜಾಮೀನುದಾರರ ಕರ್ತವ್ಯ ಮತ್ತು ಹೊಣೆಗಾರಿಕೆಗಳು :**

1. ಸಹಕಾರಿ ಸಂಘದ ಸಾಲದ ರಕಮಿಗೆ ಜಾಮೀನು ನೀಡಿದ ಸದಸ್ಯರು ಸಾಲಗಾರರಷ್ಟೇ ಜವಾಬ್ದಾರರಾಗಿರುತ್ತಾರೆ.
2. ಜಾಮೀನು ಆಗುವ ಪೂರ್ವದಲ್ಲಿ ಸಾಲಗಾರನ ಆರ್ಥಿಕ ಸ್ಥಿತಿ, ಸಾಲದ ಉದ್ದೇಶ ಹಾಗೂ ತುಂಬುವ ಸಾಮರ್ಥ್ಯದ ಬಗ್ಗೆ ಚನ್ನಾಗಿ ತಿಳಿದುಕೊಳ್ಳಬೇಕು. ಅಲ್ಲದೇ ನಿಗದಿಯಾದ ಕಾಲಕ್ಕೆ ಸಾಲಗಾರನು ಕಂತುಗಳನ್ನು ತುಂಬುವಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿಯಾಗಿದೆ.
3. ಸಾಲಗಾರನು ಪಡೆದುಕೊಂಡ ಸಾಲವನ್ನು ವೇಳೆಗೆ ಸರಿಯಾಗಿ ತುಂಬದೇ ಇದ್ದಲ್ಲಿ ಸಾಲಗಾರರ ಜೊತೆಗೆ ಅವರ ಜಾಮೀನುದಾರರನ್ನು ಕೂಡ ಸಮಾನವಾಗಿ ಕಾನೂನಿನನ್ವಯ ಪರಿಗಣಿಸಲಾಗುವುದು. ಆದ ಕಾರಣ ಸದಸ್ಯರು ಜಾಮೀನು ನೀಡಿದ ಸಾಲಗಾರನ ಸಾಲದ ಮರುಪಾವತಿಯನ್ನು ವೇಳೆಗೆ ಸರಿಯಾಗಿ ತುಂಬುವಂತೆ ಮಾಡಿ ಸಹಕರಿಸಬೇಕಾಗಿ ವಿನಂತಿ.

**ಸದಸ್ಯರು ಗಮನಿಸಬೇಕಾದ ಸಂಗತಿಗಳು :**

1. ಯಾವುದೇ ಸದಸ್ಯರು ಸಹಕಾರಿ ಸಂಘದ ಮೂರು ನಿರಂತರ ಸಾಮಾನ್ಯ ಸಭೆಗೆ ಪೂರ್ವಾನುಮತಿ ಇಲ್ಲದೆ ಗೈರುಹಾಜರಾಗಿದ್ದರೆ ಮತ್ತು ಕನಿಷ್ಠ ವ್ಯವಹಾರ ಮಾಡದಿದ್ದರೆ ಸದಸ್ಯತ್ವಕ್ಕೆ ಅನರ್ಹರಾಗುತ್ತಾರೆ.
2. ಸಹಕಾರಿ ಸಂಘವು ಸದಸ್ಯರಿಗೆ ನೀಡುವ ಲಾಭಾಂಶವನ್ನು ಆಯಾ ವರ್ಷದಿಂದ ಮೂರು ವರ್ಷದ ಒಳಗೆ ಪಡೆಯಬೇಕು. ತಪ್ಪಿದ್ದಲ್ಲಿ ಲಾಭಾಂಶವನ್ನು ಕಾಯ್ದಿಟ್ಟ ನಿಧಿಗೆ ಜಮಾ ಮಾಡಲಾಗುವುದು.
3. ಸದಸ್ಯರು ತಾವು ವಾಸಿಸುವ ವಿಳಾಸದಲ್ಲಿ ಬದಲಾವಣೆಯಾಗಿದ್ದಲ್ಲಿ ಕೂಡಲೇ ಬದಲಾದ ವಿಳಾಸವನ್ನು ಸಹಕಾರಿ ಸಂಘವು ಲಿಖಿತವಾಗಿ ತಿಳಿಸಬೇಕು. ಇದರಿಂದ ಪತ್ರ ವ್ಯವಹಾರಕ್ಕೆ ಅನೂಕೂಲವಾಗುತ್ತದೆ. ಇದಕ್ಕೆ ತಪ್ಪಿದ್ದಲ್ಲಿ ಸಹಕಾರಿ ಸಂಘವು ಯಾವುದೇ ರೀತಿಯ ಜವಾಬ್ದಾರಿಯಾಗುವುದಿಲ್ಲ.
4. ಪ್ರತಿಯೊಬ್ಬ ಸದಸ್ಯರು ಹಾಗೂ ಠೇವುದಾರರು ವಾರಸದಾರರನ್ನು ನೇಮಿಸುವ ಅವಕಾಶವಿದ್ದು, ಕಾನೂನಿನ ತೊಡಕುಗಳನ್ನು ತಪ್ಪಿಸಲು ವಾರಸದಾರರ ಹೆಸರುಗಳನ್ನು ನಮೂದಿಸಬೇಕಾಗಿ ವಿನಂತಿ.
5. ಒಬ್ಬ ವ್ಯಕ್ತಿ ಒಂದೇ ಪ್ರಕಾರ ಕಾರ್ಯನಿರ್ವಹಿಸುವ ಒಂದಕ್ಕಿಂತ ಹೆಚ್ಚು ಸಹಕಾರಿ ಸಂಘದಲ್ಲಿ ಸದಸ್ಯತ್ವವನ್ನು ಹೊಂದುವುದು ಸಹಕಾರಿ ಕಾನೂನಿನನ್ವಯ ಅಪರಾಧವಾಗುತ್ತದೆ. ಆದಕಾರಣ ಒಂದೇ ಪ್ರಕಾರ ಕಾರ್ಯನಿರ್ವಹಿಸುವ ಒಂದೇ ಸಹಕಾರಿ ಸಂಘದಲ್ಲಿ ಮಾತ್ರ ತಮ್ಮ ಸದಸ್ಯತ್ವವನ್ನು ಹೊಂದಬೇಕಾಗಿ ವಿನಂತಿ.
6. ನಿಮ್ಮ ಸೇವೆ ಸಲ್ಲಿಸುವುದೇ ನಮ್ಮ ಆದ್ಯ ಕರ್ತವ್ಯ. ಸಹಕಾರಿ ಸಂಘ ಅಭಿವೃದ್ಧಿಯ ನಿಟ್ಟಿನಲ್ಲಿ ನಿಮ್ಮ ಸಲಹೆ ಸೂಚನೆಗಳು ಯಾವಾಗಲೂ ಸ್ವಾಗತಾರ್ಹ.

**ವಿ.ಸೂ.** – ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸುತ್ತೋಲೆಯ ಮೇರೆಗೆ ಸಹಕಾರಿಯಲ್ಲಿ ವ್ಯವಹರಿಸುವ ಎಲ್ಲ ಗ್ರಾಹಕರು ಕಡ್ಡಾಯವಾಗಿ ಸದಸ್ಯರಾಗಿರಬೇಕು.

# ನಿರ್ದೇಶಕರ ಮತ್ತು ಸಿಬ್ಬಂದಿಗಳ ಸೌಲಭ್ಯಗಳು

**ನಿರ್ದೇಶಕ ಮಂಡಳಿ ಹಾಗೂ ಶಾಖಾ ಸಲಹಾ ಸಮಿತಿ ಸದಸ್ಯರಿಗೆ ಸೌಲಭ್ಯಗಳು**

ಸಹಕಾರಿ ಸಂಘವು ಎಲ್ಲ ನಿರ್ದೇಶಕರ ಹಾಗೂ ಶಾಖಾ ಸಲಹಾ ಸಮಿತಿ ಸದಸ್ಯರಿಗೆ ವಿಮೆ ಸೌಲಭ್ಯ ನೀಡಲಾಗಿದ್ದು, ನೈಸರ್ಗಿಕ ಮರಣ ಹೊಂದಿದ್ದಲ್ಲಿ ಅವರ ಕುಟುಂಬಕ್ಕೆ ರೂ. 10 ಲಕ್ಷ, ಅಪಘಾತ ಮರಣ ಹೊಂದಿದ್ದಲ್ಲಿ ರೂ. 20 ಲಕ್ಷ ಮರಣೋತ್ತರ ನಿಧಿ ಲಭಿಸುತ್ತದೆ.

**ಸಿಬ್ಬಂದಿ ಸವಲತ್ತುಗಳು–**


* ಭವಿಷ್ಯ ನಿಧಿ (PF)
* ಉಪದಾನ ನಿಧಿ (Gratuity)
* ಗುಂಪು ಉಳಿತಾಯ ವಿಮೆ (GSLI)
* ಬೋನಸ್ – ಒಂದು ತಿಂಗಳ ವೇತನ
* Employees Deposit Linked Insurance (EDLI )


* **ರಾಜ್ಯ ನೌಕರರ ವಿಮೆ (ESI)–** ಸಹಕಾರಿ ಸಂಘದ ಎಲ್ಲ ಸಿಬ್ಬಂದಿಯವರನ್ನು ಕರ್ನಾಟಕ ರಾಜ್ಯ ನೌಕರರ ವಿಮೆ (ESI) ಯೋಜನೆಯಡಿ ನೋಂದಾಯಿಸಲಾಗಿದೆ. ಸಿಬ್ಬಂದಿಗಳ ಕುಟುಂಬದ ಸಂಪೂರ್ಣ ಆರೋಗ್ಯ ರಕ್ಷಣೆ ಈ ಯೋಜನೆಯ ಮೂಲ ಉದ್ದೇಶವಾಗಿದೆ. (ಸಿಬ್ಬಂದಿಯ ತಂದೆ–ತಾಯಿ, ಹೆಂಡತಿ ಮತ್ತು ಮಕ್ಕಳು ಈ ಯೋಜನೆಯಲ್ಲಿ ನಿಯಮಾನುಸಾರ ಪಾಲ್ಗೊಂಡಿರುತ್ತಾರೆ.)
* ಸಿಬ್ಬಂದಿ ಪ್ರವಾಸ ಭತ್ತೆ, ಮಕ್ಕಳ ಶೈಕ್ಷಣಿಕ ಭತ್ತೆ, ಮನೆ ಬಾಡಿಗೆ, ನಗರ ಭತ್ತೆ ಮತ್ತು ವರ್ಗಾವಣೆ ಭತ್ತೆ ನಮ್ಮ ಸಹಕಾರಿ ಸಂಘದಿಂದ ನಿಡಲಾಗುತ್ತಿದೆ.
* ಸಿಬ್ಬಂದಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ವೇತನ ಸಾಲ ನೀಡಲಾಗುತ್ತಿದೆ.


**ಸಿಬ್ಬಂದಿ ಸಂಪೂರ್ಣ ಸುರಕ್ಷಾ ಯೋಜನೆ–**


ಪ್ರತಿ ಸಿಬ್ಬಂದಿಯವರ ಹೆಸರಿನಲ್ಲಿ ಜೀವ ವಿಮೆ ಮತ್ತು ಅಫಘಾತ ವಿಮೆ ಪಾಲಿಸಿ ಮಾಡಲಾಗಿದ್ದು, ಸಿಬ್ಬಂದಿ ಸಹಜ ಮರಣಕ್ಕೆ ರೂ. 10 ಲಕ್ಷ ಮತ್ತು ಅಫಘಾತ ಮರಣಕ್ಕೆ ರೂ. 20 ಲಕ್ಷ ಅವರ ಕುಟುಂಬಕ್ಕೆ ಲಭಿಸುತ್ತದೆ.


## GROWTH GRAPH











13 ನೇ ಪ್ರೇರಣಾ ಉತ್ಸವದ ಅಂಗವಾಗಿ ನವದೆಹಲಿಯ ವಿಶೇಷ ಚೇತನ ಮಕ್ಕಳಿಗೆ ಸೇವೆ ಸಲ್ಲಿಸುತ್ತಿರುವ ಕು.ಯಾಸಿಕಾ ಭಟ್ಟ ಅವರಿಗೆ ಪ್ರೇರಣಾ ಪುರಸ್ಕಾರ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.




ಜೊಲ್ಲೆ ಗ್ರುಪ್ ವತಿಯಿಂದ ಆಯೋಜಿಸಿದ್ದ ಶ್ರೀ ಮಹಾಲಕ್ಷ್ಮೀ ಸೌಭಾಗ್ಯದಾತೆ ಕುಂಕುಮಾರ್ಚನೆ ಕಾರ್ಯಕ್ರಮದಲ್ಲಿ ಸಾವಿರಾರು ಸುಮಂಗಲಿಯರು ಭಾಗವಹಿಸಿ ಭಕ್ತಿಯಿಂದ ಪೂಜೆ ಸಲ್ಲಿಸಿದ ದೃಶ್ಯ.



ಜೊಲ್ಲೆ ಗ್ರೂಪ್ ವತಿಯಿಂದ ನಿಪ್ಪಾಣಿಯಲ್ಲಿ ಭವ್ಯ ಕೃಷಿ ಉತ್ಸವ ಉದ್ಘಾಟನಾ ಸಮಾರಂಭ



ಜೊಲ್ಲೆ ಗ್ರೂಪ್ ವತಿಯಿಂದ ನಿಪ್ಪಾಣಿಯಲ್ಲಿ ಕೃಷಿ ಉತ್ಸವದಲ್ಲಿ ಶಿವಶಂಭು ನಾಟಕದ ಪ್ರದರ್ಶನ



ಖಡಕಲಾಟ ಶಾಖೆಯ ಸ್ಥಳಾಂತರ ಮತ್ತು ಪೂಜಾ ಸಮಾರಂಭ



ಮೃತ ಸದಸ್ಯರ ವಾರಸುದಾರರಿಗೆ ಮರಣೋತ್ತರ ಪರಿಹಾರ ನಿಧಿ ವಿತರಣೆ




ಜ್ಯೋತಿ ಲಕ್ಕಿ ಡ್ರಾ ವಿಜೇತರರಿಗೆ ಬಹುಮಾನ ವಿತರಣೆ

# ನಮ್ಮ ಸಹಕಾರಿಯ ಆಕರ್ಷಕ ಠೇವು ಯೋಜನೆಗಳು

**ಈ ಯೋಜನೆಯು 30-9-2025 ರ ವರೆಗೆ ಮಾತ್ರ**

| ಬಸವ ಜ್ಯೋತಿ ಠೇವು (ತಿಂಗಳ ಬಡ್ಡಿ) ಯೋಜನೆ | |
|---|---|
| 1 ವರ್ಷದವರೆಗೆ ಠೇವು | 8% |
| 3 ವರ್ಷದವರೆಗೆ ಠೇವು | 8.5% |

| ಜ್ಯೋತಿ ಠೇವು ಯೋಜನೆ | |
|---|---|
| 15 ರಿಂದ 29 ದಿವಸದವರೆಗೆ | 4.5% |
| 30 ರಿಂದ 45 ದಿವಸದವರೆಗೆ | 6% |
| 46 ರಿಂದ 90 ದಿವಸದವರೆಗೆ | 8.5% |
| 91 ರಿಂದ 180 ದಿವಸದವರೆಗೆ | 9% |
| 181 ದಿನದಿಂದ 1 ವರ್ಷದವರೆಗೆ | 9.5% |

## ದ್ವಿಗುಣ ಯೋಜನೆ 8 ವರ್ಷ ಅವಧಿಗೆ

| ಮುದ್ದತ ಠೇವು ಯೋಜನೆ | |
|---|---|
| 12 ತಿಂಗಳಿಂದ 24 ತಿಂಗಳವರೆಗೆ | 10% |
| 25 ತಿಂಗಳಿಂದ 36 ತಿಂಗಳವರೆಗೆ | 9.5% |

| ರಿಕರಿಂಗ ಠೇವು ಯೋಜನೆ | |
|---|---|
| 1 ವರ್ಷ ನಿಗದಿತ ಅವಧಿಗೆ | 8.5% |
| 2 ವರ್ಷ ಮತ್ತು 3 ವರ್ಷ ನಿಗದಿತ ಅವಧಿಗೆ | 9% |

| ಆಶಾಜ್ಯೋತಿ ಠೇವು (ತ್ರೈಮಾಸಿಕ ಬಡ್ಡಿ ಯೋಜನೆ) | |
|---|---|
| 1 ವರ್ಷ ನಿಗದಿತ ಅವಧಿಗೆ | 8.5% |
| 2 ವರ್ಷ ನಿಗದಿತ ಅವಧಿಗೆ | 9% |
| 3 ವರ್ಷ ನಿಗದಿತ ಅವಧಿಗೆ | 9.5% |

ಹಿರಿಯ (60 ವರ್ಷ ಹಾಗೂ ಮೇಲ್ಪಟ್ಟು) ನಾಗರಿಕರಿಗೆ, ಮಾಜಿ ಸೈನಿಕರಿಗೆ, ವಿಧವೆಯರಿಗೆ ಹಾಗೂ ಅಂಗವಿಕಲರಿಗೆ ಚಾಲ್ತಿ ಬಡ್ಡಿ ದರಕ್ಕಿಂತ 0.5% ಹೆಚ್ಚಿಗೆ ಬಡ್ಡಿ ಸೌಲಭ್ಯ (ದ್ವಿಗುಣ ಯೋಜನೆ ಹೊರತುಪಡಿಸಿ)

## ವಿವಿಧ ಸಾಲ ಸೌಲಭ್ಯಗಳು

| | | |
|---|---|---|
| ಗೃಹ ಸಾಲ | ಕೃಷಿ ಸಾಲ | ಬಂಗಾರ ಸಾಲ |
| ನಗದು ಪತ್ತಿನ ಸಾಲ | ಶಿಕ್ಷಣ ಸಾಲ | ಜ್ಯೋತಿ ಕಿರು ಸಾಲ |
| ವಾಹನ ಸಾಲ | ಕೈಗಾರಿಕೆ ಸಾಲ | |

- ಸಾಲಗಳ ಬಡ್ಡಿದರ – ಮಾಸಿಕ ಬಡ್ಡಿ 14%, ತ್ರೈಮಾಸಿಕ ಬಡ್ಡಿ 15%, ವಾರ್ಷಿಕ ಬಡ್ಡಿ 16%
- ಬಂಗಾರ ಸಾಲ – ಮಾಸಿಕ ಬಡ್ಡಿ 13%, ತ್ರೈಮಾಸಿಕ ಬಡ್ಡಿ 14%, ವಾರ್ಷಿಕ ಬಡ್ಡಿ 15%

## ವಿಶೇಷ ಸೇವೆಗಳು

| | |
|---|---|
| ಜೀವ, ಆರೋಗ್ಯ ಹಾಗೂ ಸಾಮಾನ್ಯ ವಿಮೆ | NEFT / RTGS ಸರ್ವಿಸ್ (Inward & Outward) (ಬ್ಯಾಂಕಗಳ ಸಹಯೋಗದೊಂದಿಗೆ) |
| ಮ್ಯೂಚುವಲ್ ಫಂಡ | ಇಂಟರ್‌ನ್ಯಾಷನಲ್ ಮನಿ ಟ್ರಾನ್ಸಫರ್ |
| ಶೇರ್ ಟ್ರೆಡಿಂಗ | ವಿದೇಶಿ ಹಣ ವಿನಿಮಯ |
| ಡಿ-ಮ್ಯಾಟ್ ಅಕೌಂಟ್ | ಪಾಸ್ ಪೋರ್ಟ್ ಸೇವೆ |
| ಪ್ಯಾನ್ ಕಾರ್ಡ್ ಸೇವೆ | ವಿಮಾನ, ರೈಲು ಮತ್ತು ಬಸ್ ಟಿಕೇಟ್ ಬುಕಿಂಗ್ |
| ಚಾರಿಯಟ್ ವರ್ಲ್ಡ್ ಟೂರ್ಸ & ಸರ್ವಿಸಸ್ | ಡಿ.ಟಿ.ಎಚ್ ಮತ್ತು ಮೊಬೈಲ್ ರಿಚಾರ್ಜ |
| ಮಿನಿ ಎ.ಟಿ.ಎಮ್. | ಇ-ಸ್ಟ್ಯಾಂಪ್ |

M.R. No. ................................

ತೆರೆದ-ಅಂಚೆ

ಗೆ,
ಶ್ರೀ. ______________________

______________________

______________________

ಮುಖ್ಯ ಕಛೇರಿ : ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ. ತಾ. ಚಿಕ್ಕೋಡಿ ಜಿ. ಬೆಳಗಾವಿ-591244 Ph : 7338047005
E-mail : gm@jyotimultipurpose.com website : www.jyotimultipurpose.com